ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 30-11-1999.

# *ಪಾಸ್ ವಿತ್ ಆನರ್ ಆಗಲು ಎಲ್ಲಾ ಖಜಾನೆಗಳ ಖಾತೆಯನ್ನು ಜಮಾ ಮಾಡುವುದರ ಮೂಲಕ ಸಂಪನ್ನರಾಗಿರಿ*

(पास विद ऑनर बनने के लिए सर्व खज़ानों के खाते को जमा कर सम्पन्न बनो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಬಾಪ್‌ದಾದಾ ಇಂದು ಯಾವ ಸಭೆಯನ್ನು ನೋಡುತ್ತಿದ್ದಾರೆ? ಇಂದಿನ ಸಭೆಯಲ್ಲಿರುವ ಪ್ರತಿಯೊಂದು ಮಗುವು ಅತ್ಯುನ್ನತವಾಗಿದೆ ಮತ್ತು ಅವಿನಾಶಿ ಖಜಾನೆಗಳಿಂದ ಶ್ರೀಮಂತರಾಗಿದ್ದಾರೆ. ಜಗತ್ತಿನ ಜನರು ಎಷ್ಟೇ ಶ್ರೀಮಂತರಾಗಿದ್ದರೂ, ಒಂದು ಜನ್ಮಕ್ಕೆ ಮಾತ್ರ ಶ್ರೀಮಂತರು. ಒಂದು ಜನ್ಮಕ್ಕೂ ಸಹ ಶ್ರೀಮಂತವಾಗಿರುವರೋ ಇಲ್ಲವೋ ಎಂಬುದು ಖಚಿತವಿಲ್ಲ. ಇಡೀ ಪ್ರಪಂಚದಲ್ಲಿ ಎಷ್ಟೇ ದೊಡ್ಡ ಶ್ರೀಮಂತನಾಗಿದ್ದರೂ ಕೂಡ ಅದು ಕೇವಲ ಒಂದು ಜನ್ಮಕ್ಕಾಗಿ ಮಾತ್ರ, ಮತ್ತು ತಾವು ಅವಿನಾಶಿ ಸಂಪತ್ತಿನಿಂದ ಸಂಪನ್ನರಾಗಿರುವುದರಿಂದ ನಾವು ಅನೇಕ ಜನ್ಮದ ಶ್ರೀಮಂತರು ಎಂದು ದೃಢತೆಯಿಂದ ಮತ್ತು ನಶೆಯಿಂದ ಹೇಳುತ್ತೀರಿ. ನಾವು ಈ ಸಮಯದ ಪುರುಷಾರ್ಥದಿಂದ ಒಂದೇ ದಿನದಲ್ಲಿ ಬಹಳಷ್ಟು ಸಂಪಾದನೆಯನ್ನು ಮಾಡುವಂತಹವರಾಗಿದ್ದೇವೆ ಎಂದು ತಮಗೆ ತಿಳಿದಿದೆ. ಒಂದು ದಿನದಲ್ಲಿ ಎಷ್ಟು ಸಂಪಾದಿಸುತ್ತೀರಿ ಎಂದು ತಮಗೆ ತಿಳಿದಿದೆಯೇ? ಇದರ ಲೆಕ್ಕಾಚಾರ ತಿಳಿದಿದೆ ತಾನೆ! ಹಾಡಲಾಗಿದೆ, ಅನುಭವವಿದೆ-- ' ಒಂದು ಹೆಜ್ಜೆಯಲ್ಲಿ ಪದುಮದಷ್ಟು' ಹಾಗಾದರೆ ಒಂದು ದಿನದಲ್ಲಿ ತಂದೆಯ ಮೂಲಕ, ತಂದೆಯ ಜ್ಞಾನದ ಮೂಲಕ, ನೆನಪಿನ ಮೂಲಕ ಪ್ರತಿ ಹೆಜ್ಜೆಯಲ್ಲಿ ಪದಮ ಅಂದರೆ ಕೋಟಿಯಷ್ಟು ಜಮಾ ಆಗುತ್ತದೆ ಆದ್ದರಿಂದ ದಿನವಿಡೀ ಬಾಬಾನ

ನೆನಪಿನಲ್ಲಿ ಇಡುವ ಪ್ರತಿಯೊಂದು ಹೆಜ್ಜೆಯಲ್ಲಿಯೂ ಅನೇಕ ಕೋಟಿ ಸಂಗ್ರಹಿಸುತ್ತೀರಿ ಹಾಗಾದರೆ ಜಗತ್ತಿನಲ್ಲಿ ಹೀಗೆ ಹಣ ಸಂಪಾದಿಸುವ ಮತ್ತು ಇಂತಹ ಸಂಪತ್ತನ್ನು ಸಂಗ್ರಹಿಸುವವರು ಯಾರಾದರೂ ಇರಬಹುದೆ! ಅಥವಾ ಯಾರಾದರೂ ಇದ್ದಾರೆಯೇ? ಪ್ರಪಂಚದಾದ್ಯಂತ ಪ್ರಯಾಣಿಸಿ ನೋಡಿ ನಿಮ್ಮನ್ನು ಹೊರತುಪಡಿಸಿ ಯಾರೂ ಇಷ್ಟೊಂದನ್ನು ಸಂಗ್ರಹಿಸಲು ಸಾಧ್ಯವಿಲ್ಲ ಅದಕ್ಕಾಗಿಯೇ ತಂದೆಯು ಹೇಳುತ್ತಾರೆ-- ನಾವು ಆತ್ಮರ ಭಾಗ್ಯವು ಪರಮಾತ್ಮನಿಂದ ಇಷ್ಟು ಶ್ರೇಷ್ಠವಾಗಿದೆ ಎಂಬ ಶ್ರೇಷ್ಠ ಸ್ಮೃತಿಯಲ್ಲಿ ಇರಿ.

ತಮ್ಮ ಖಜಾನೆಗಳು ಏನು ಎಂದು ತಮಗೆ ತಿಳಿದಿದೆ ತಾನೇ! ಸಮಯದ ಖಜಾನೆ(ಸಂಪತ್ತು)ಯನ್ನು ಸಹ ನೀವು ತಿಳಿದಿದ್ದೀರಿ ಈ ಸಂಗಮಯುಗದ ಸಮಯವು ಎಷ್ಟು ಶ್ರೇಷ್ಠವಾಗಿದೆ, ನೀವು ಯಾವ ಪ್ರಾಪ್ತಿಯನ್ನು ಬಯಸುತ್ತಿರೋ ಅದನ್ನು ಅಧಿಕಾರದಿಂದ ತಂದೆಯಿಂದ ತೆಗೆದುಕೊಳ್ಳುತ್ತಿದ್ದೀರಿ. ತಾವು ಎಲ್ಲಾ ಅಧಿಕಾರಗಳನ್ನು ಪ್ರಾಪ್ತಿ ಮಾಡಿಕೊಂಡಿದ್ದೀರಲ್ಲವೇ? ಒಂದೊಂದು ಶ್ರೇಷ್ಠ ಸಂಕಲ್ಪವು ಎಷ್ಟು ದೊಡ್ಡ ಸಂಪತ್ತಾಗಿದೆ, ಸಮಯವೂ ಕೂಡ ದೊಡ್ಡ ಖಜಾನೆ, ಸಂಕಲ್ಪವೂ ಕೂಡ ದೊಡ್ಡ ಖಜಾನೆಯಾಗಿದೆ ಸರ್ವ ಶಕ್ತಿಗಳು ಒಂದಕ್ಕಿಂತ ಒಂದು ದೊಡ್ಡ ಖಜಾನೆಗಳಾಗಿವೆ. ಒಂದೊಂದು ಜ್ಞಾನ ರತ್ನವು ಎಷ್ಟು ದೊಡ್ಡ ಖಜಾನೆಯಾಗಿದೆ. ಪ್ರತಿಯೊಂದು ಸದ್ಗುಣವು ಎಷ್ಟು ದೊಡ್ಡ ಖಜಾನೆಯಾಗಿದೆ! ಶ್ವಾಸ ಶ್ವಾಸದಲ್ಲಿ ಪರಮಾತ್ಮನ ಸ್ಮೃತಿ ಮಾಡುವುದರಿಂದ ಶ್ವಾಸವೂ ಸಫಲವಾಗಿ ಬಿಡುತ್ತದೆ. ಎಂದು ಜಗತ್ತಿನವರು ತಿಳಿದುಕೊಂಡಿದ್ದಾರೆ, ನಂಬಿದ್ದಾರೆ. ಹಾಗಾಗಿ ತಮ್ಮೆಲ್ಲರ ಶ್ವಾಸ ಸಫಲತೆಯ ಸ್ವರೂಪವಾಗಿದೆ, ವ್ಯರ್ಥವಾಗಿಲ್ಲ. ಪ್ರತಿಯೊಂದು ಶ್ವಾಸದಲ್ಲೂ ಸಫಲತೆಯ ಅಧಿಕಾರವಿದೆ. ಬಾಪ್‌ದಾದಾರವರಂತೂ ಎಲ್ಲಾ ಮಕ್ಕಳಿಗೂ ಸರ್ವ ಸಂಪತ್ತುಗಳನ್ನು ಸಮಾನವಾಗಿ ನೀಡಿದ್ದಾರೆ. ಎಲ್ಲವನ್ನು ನೀಡಿದ್ದಾರೆ ಹಾಗೂ ಸಮಾನವಾಗಿಯೂ ನೀಡಿದ್ದಾರೆ. ಕೆಲವರಿಗೆ ಒಂದರಷ್ಟು, ಕೆಲವರಿಗೆ ಹತ್ತರಷ್ಟು. ಇನ್ನೂ ಕೆಲವರಿಗೆ ನೂರರಷ್ಟು.... ಹೀಗೆ ಕೊಟ್ಟಿಲ್ಲ. ಕೊಡುವಂತಹ ಪರಮಾತ್ಮನು ಒಂದೊಂದು ಮಗುವಿಗೂ ಸರ್ವ ಖಜಾನೆಗಳನ್ನು ಬ್ರಾಹ್ಮಣರಾದ ನಂತರ ಸಮಾನವಾಗಿ ಕೊಟ್ಟಿದ್ದಾರೆ ಆದರೆ ಖಜಾನೆಗಳನ್ನು ಎಷ್ಟು ಜಮಾ ಮಾಡುತ್ತಾರೆ ಅಥವಾ ಕಳೆದುಕೊಳ್ಳುತ್ತಾರೆ ಎನ್ನುವುದು ಪ್ರತಿಯೊಬ್ಬರ ಮೇಲೆ ಅವಲಂಬಿತವಾಗಿದೆ. ನಾವು ಇಡೀ ದಿನದಲ್ಲಿ ಎಷ್ಟನ್ನು ಸಂಗ್ರಹಿಸುತ್ತೇವೆ ಅಥವಾ ಕಳೆದುಕೊಳ್ಳುತ್ತೇವೆ ಎಂಬುದನ್ನು ಪ್ರತಿಯೊಬ್ಬರೂ ಪರಿಶೀಲಿಸಬೇಕು. ಪರಿಶೀಲಿಸುತ್ತಿದ್ದೀರಾ? ಇದು ಒಂದು ಜನ್ಮಕ್ಕಲ್ಲ, ಆದರೆ ಪ್ರತಿಯೊಂದು ಜನ್ಮಕ್ಕೂ ಆಗಿರುವುದರಿಂದ ಪರಿಶೀಲಿಸುವುದು ಅವಶ್ಯಕ. ಅನೇಕ ಜನ್ಮಗಳಿಗಾಗಿ ಸಂಗ್ರಹಿಸಿ ಇಡಬೇಕಾಗಿದೆ. ಜಮಾ ಮಾಡುವ ವಿಧಿ ಗೊತ್ತಿದೆಯೇ? ಬಹಳ ಸಹಜವಾಗಿದೆ. ಬಿಂದುವನ್ನು ಮಾತ್ರ ಇಡುತ್ತಾ ಹೋಗಬೇಕು. ಬಿಂಡುವಿನ ಸ್ಮೃತಿ(ನೆನಪು) ಇದ್ದರೆ ಜಮಾ ಆಗುತ್ತಾ ಹೋಗುತ್ತದೆ. ಹೇಗೆ ಭೌತಿಕವಾಗಿಯೂ ಕೂಡ ಒಂದರ ಮುಂದೆ ಸೊನ್ನೆಯನ್ನು ಹಾಕುತ್ತಾ ಹೋದಂತೆ ಸಂಪತ್ತು ಜಾಸ್ತಿ ಆಗುತ್ತಾ ಹೋಗುತ್ತದೆಯಲ್ಲವೇ, ಅದೇ ರೀತಿ ಆತ್ಮನು ಬಿಂದು, ತಂದೆಯೂ ಬಿಂದು ಮತ್ತು ಡ್ರಾಮದಲ್ಲಿ ಏನು ಆಗಿ ಹೋಯಿತೋ ಅದು ಕೂಡ ಫುಲ್ ಸ್ಟಾಪ್ ಅಂದರೆ ಬಿಂದು. ಪ್ರತಿಯೊಂದು ಖಜಾನೆಯನ್ನು ಬಿಂದು ರೂಪದಲ್ಲಿ ನೆನಪು ಮಾಡಿಕೊಂಡರೆ ಜಮಾ ಆಗುತ್ತಾ ಹೋಗುತ್ತದೆ ಅನುಭವವಿದೆಯಲ್ಲವೇ! ಬಿಂದು ಹಾಕಿದ್ದೀರಿ. ಬಿಂದು ಹಾಕಿದಿರಿ ಹಾಗೂ ವ್ಯರ್ಥದಿಂದ ಜಮಾ ಮಾಡುತ್ತಾ ಹೋಗಿರಿ. ಬಿಂದುವನ್ನು ಹಾಕಲು ಬರುತ್ತದೆಯೇ? ಅನೇಕ ಬಾರಿ ಬಿಂದು ಹಾಕಲು ಪ್ರಯತ್ನ ಪಡುತ್ತೀರಿ ಆದರೆ ಬಿಂದುವಿನ ಬದಲು ದೊಡ್ಡ ರೇಖೆಯಾಗಿ ಬಿಡುತ್ತದೆ, ಬಿಂದುವಿನ ಬದಲು ಪ್ರಶ್ನಾರ್ಥಕ ಚಿಹ್ನೆ ಆಗಿಬಿಡುತ್ತದೆ, ಆಶ್ಚರ್ಯದ ರೇಖೆಯಾಗಿ ಬಿಡುತ್ತದೆ ಆದ್ದರಿಂದ ಜಮಾದ ಖಾತೆಯನ್ನು ಹೆಚ್ಚಿಸುವ

ವಿಧಾನ ಬಿಂದು ಹಾಕುವುದು ಮತ್ತು ಅದನ್ನು ಕಳೆದುಕೊಳ್ಳುವ ಮಾರ್ಗವೆಂದರೆ ಉದ್ದ ರೇಖೆ ಹಾಕುವುದು, ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕುವುದು & ಆಶ್ಚರ್ಯದ ಚಿಹ್ನೆಯನ್ನು ಹಾಕುವುದು. ಯಾವುದು ಸಹಜವಾಗಿದೆ? ಬಿಂದು ಹಾಕುವುದು ತಾನೇ! ಆದ್ದರಿಂದ ವಿಧಾನವು ತುಂಬಾ ಸುಲಭ-- ಸ್ವಮಾನದಲ್ಲಿರುವುದು ಮತ್ತು ತಂದೆಯನ್ನು ನೆನಪು ಮಾಡುವುದು ಹಾಗೂ ವ್ಯರ್ಥಕ್ಕೆ ಬಿಂದು ಹಾಕುವುದು.

ಬಾಪ್‌ದಾದಾ ಈ ಹಿಂದೆಯೂ ಹೇಳಿದ್ದಾರೆ-- ಅಮೃತ ವೇಳೆಯಲ್ಲಿ ಪ್ರತಿದಿನ ಮೂರು ಬಿಂದುಗಳ ಸ್ಮೃತಿಯ ತಿಲಕವನ್ನು ಹಚ್ಚಿಕೊಂಡರೆ ಒಂದು ಖಜಾನೆಯೂ ವ್ಯರ್ಥವಾಗುವುದಿಲ್ಲ. ಎಲ್ಲಾ ಸಮಯಗಳಲ್ಲೂ, ಪ್ರತಿಯೊಂದು ಸಂಪತ್ತು ಜಮಾ ಆಗುತ್ತಾ ಹೋಗುತ್ತದೆ. ಬಾಪ್‌ದಾದಾ ಎಲ್ಲಾ ಮಕ್ಕಳ ಪ್ರತಿಯೊಂದು ಸಂಪತ್ತಿನ ಜಮಾದ ಖಾತೆಯ ಚಾರ್ಟ್‌ನ್ನು ನೋಡಿದರು. ಅದರಲ್ಲಿ ಏನು ನೋಡಿದರು? ಈಗಲೂ ಜಮಾದ ಖಾತೆ ಎಷ್ಟು ಇರಬೇಕೋ ಅಷ್ಟು ಇಲ್ಲ. ಸಮಯ, ಸಂಕಲ್ಪ, ಮಾತು ಸಹ ವ್ಯರ್ಥವಾಗುತ್ತಿದೆ ನಡೆಯುತ್ತಾ ನಡೆಯುತ್ತಾ ಕೆಲವೊಮ್ಮೆ ಸಮಯದ ಮಹತ್ವ ಪ್ರತ್ಯಕ್ಷ ರೂಪದಲ್ಲಿ ಕಡಿಮೆಯಾಗುತ್ತಿದೆ. ಸಮಯದ ಪ್ರಾಮುಖ್ಯತೆಯನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಂಡರೆ, ನೀವು ಸಮಯವನ್ನು ಇನ್ನೂ ಹೆಚ್ಚಾಗಿ ಸಫಲ ಮಾಡಿಕೊಳ್ಳಬಹುದು. ಇಡೀ ದಿನ ಸಾಧಾರಣ ರೂಪದಲ್ಲಿ ಸಮಯ ಕಳೆದು ಹೋಗುತ್ತದೆ. ತಪ್ಪಾಗಿ ಅಲ್ಲ ಸಾಧಾರಣವಾಗಿ ಕಳೆದು ಹೋಗುತ್ತದೆ. ಅದೇ ರೀತಿ ಸಂಕಲ್ಪವು ಕೂಡ ಕೆಟ್ಟದ್ದಲ್ಲ ಆದರೆ ವ್ಯರ್ಥ ಸಂಕಲ್ಪಗಳಿರುತ್ತವೆ. ಒಂದು ಗಂಟೆಯ ಚೆಕಿಂಗ್ ಮಾಡಿ, ಒಂದು ಗಂಟೆಯಲ್ಲಿ ಸಮಯ ಅಥವಾ ಸಂಕಲ್ಪ ಎಷ್ಟು ಸಾಧಾರಣವಾಗಿ ಕಳೆದು ಹೋಗುತ್ತವೆ? ಜಮಾ ಆಗುವುದಿಲ್ಲ. ಆಗ ಬಾಪ್‌ದಾದಾ ಕೂಡ ಸೂಚನೆಯನ್ನು ಕೊಡುತ್ತಾರೆ ಅಂದಾಗ ಬಾಪ್‌ದಾದಾರವರಿಗೂ ಮಕ್ಕಳು ಬಹಳ ಸಾಂತ್ವನ ಹೇಳುತ್ತಾರೆ -- ಹೀಗೆ ಸ್ವಲ್ಪ ಸಂಕಲ್ಪ ಇದೆ ಅಷ್ಟೇ, ಬೇರೆ ಏನಿಲ್ಲ, ಸಂಕಲ್ಪದಲ್ಲಿ ಮಾತ್ರ ಈ ರೀತಿ ಇದೆ. ಸಂಪೂರ್ಣರಾಗಿಬಿಡುತ್ತೇವೆ. ಸರಿಯಾಗಿ ಬಿಡುತ್ತೇವೆ. ಈಗಲೇ ಅಂತಿಮವು ಬಂದಿಲ್ಲವಲ್ಲ, ಇನ್ನು ಸ್ವಲ್ಪ ಸಮಯವಿದೆಯಲ್ಲವೇ. ಸಮಯ ಬಂದಾಗ ಸಂಪೂರ್ಣವಾಗಿ ಬಿಡುತ್ತೇವೆ. ಆದರೆ ದೀರ್ಘಾವಧಿಯ ಜಮಾದ ಅವಶ್ಯಕತೆ ಇದೆ ಎಂದು ಬಾಪ್‌ದಾದಾ ಪದೇ ಪದೇ ಹೇಳಿದ್ದಾರೆ. ಜಮಾದ ಖಾತೆಯನ್ನು ಅಂತ್ಯದಲ್ಲಿ ಸಂಪನ್ನಗೊಳಿಸುತ್ತೇವೆ, ಸಮಯ ಬಂದಾಗ ಸಂಪೂರ್ಣ ಆಗುತ್ತೇವೆ ಎಂದು ಹೇಳುವ ಹಾಗಿಲ್ಲ. ದೀರ್ಘಾವಧಿಯ ಜಮಾದ ಖಾತೆ ದೀರ್ಘಕಾಲದವರೆಗೆ ಉಪಯೋಗಕ್ಕೆ ಬರುತ್ತದೆ. ವಾರ ಸತ್ವವನ್ನು ತೆಗೆದುಕೊಳ್ಳುವಾಗ ನಾವು ಲಕ್ಷ್ಮಿ ನಾರಾಯಣರಾಗುತ್ತೇವೆ ಎಂದು ಎಲ್ಲರೂ ಹೇಳುತ್ತೀರಿ. ತ್ರೇತಾಯುಗಿ ಆಗುತ್ತೀರಾ ಎಂದಾಗ ಯಾರೂ ಕೈ ಎತ್ತುವುದಿಲ್ಲ. ಹಾಗೂ ಲಕ್ಷ್ಮೀನಾರಾಯಣರಾಗುತ್ತೇವೆ ಎಂದು ಎಲ್ಲರೂ ಕೈ ಎತ್ತುತ್ತೀರಿ. ದೀರ್ಘಕಾಲದ ಜಮಾದ ಖಾತೆಯಿದ್ದರೆ ಮಾತ್ರ ಪೂರ್ಣ ವಾರಸತ್ವ ಸಿಗುತ್ತದೆ. ಒಂದುವೇಳೆ ಸ್ವಲ್ಪವೇ ಜಮಾ ಆಗಿದ್ದರೆ ಪೂರ್ಣ ವಾರಸತ್ವ ಹೇಗೆ ಸಿಗುತ್ತದೆ? ಎಲ್ಲಾ ಖಜಾನೆಗಳನ್ನು ಎಷ್ಟು ಬೇಕೋ ಅಷ್ಟು ಈಗಲೇ ಜಮಾ ಮಾಡಿಕೊಳ್ಳಿರಿ. ಆಗುತ್ತದೆ, ಆಗುತ್ತೇವೆ... ಎಂದು ಹೇಳಬೇಡಿ "ಮಾಡಲೇಬೇಕು" -- ಇದು ದೃಢತೆಯಾಗಿದೆ. ಅಮೃತವೇಳೆಯಲ್ಲಿ ಒಳ್ಳೆಯ ಸ್ಥಿತಿಯಲ್ಲಿ ಕುಳಿತುಕೊಂಡಾಗ ಮನಸ್ಸಿನಲ್ಲಿಯೇ ಬಹಳ ವಚನಗಳನ್ನು ಕೊಡುತ್ತೀರಿ—ಇದನ್ನು ಮಾಡುತ್ತೇವೆ, ಹೀಗೆ ಮಾಡುತ್ತೇವೆ. ಅದ್ಭುತಗಳನ್ನು ಮಾಡಿ ತೋರಿಸುತ್ತೇವೆ. ಇದಂತೂ ಒಳ್ಳೆಯ ಮಾತಾಗಿದೆ. ಶ್ರೇಷ್ಠ ಸಂಕಲ್ಪಗಳನ್ನು ಮಾಡುತ್ತೀರಿ, ಆದರೆ ಈ ಎಲ್ಲಾ ಮಾತುಗಳನ್ನು ಕರ್ಮದಲ್ಲಿ ತನ್ನಿರಿ ಎಂದು ಬಾಪ್‌ದಾದಾ ಹೇಳುತ್ತಾರೆ. ವಚನಗಳನ್ನು ಮಾತ್ರ ಕೊಡಬೇಡಿ, ಆದರೆ ಅವೆಲ್ಲವುಗಳನ್ನು ಮನ, ವಚನ, ಕರ್ಮಗಳ ರೂಪಕ್ಕೆ ತನ್ನಿ. ಮಕ್ಕಳು ಬಹಳ ಒಳ್ಳೊಳ್ಳೆಯ ಸಂಕಲ್ಪಗಳನ್ನು

ಮಾಡುತ್ತಾರೆ, ಬಾಪ್‌ದಾದಾ ಆ ಸಮಯದಲ್ಲಿ ಮಕ್ಕಳ ಧೈರ್ಯ(ಸಾಹಸ)ಕ್ಕೆ ತುಂಬಾ ಸಂತೋಷ ಪಡುತ್ತಾರೆ. ಹೀಗೆ ಮಾಡುತ್ತೇವೆ, ಹೀಗೆ ಆಗುತ್ತೇವೆ ಎಂಬ ಧೈರ್ಯ ತುಂಬಾ ಚೆನ್ನಾಗಿ ಇದೆ. ಈ ಧೈರ್ಯಕ್ಕೆ ಬಾಪ್‌ದಾದಾ ಖುಷಿಯಾಗುತ್ತಾರೆ. ಆದರೆ ಅದು ಕೆಲವೊಮ್ಮೆ ಮಾತ್ರ ಕರ್ಮದಲ್ಲಿ ಬರುತ್ತದೆ. ವಚನ ಕೊಡುವುದು ತುಂಬಾ ಸಹಜ. ಆದರೆ ಅದನ್ನು ಕರ್ಮದಲ್ಲಿ ತಂದರೆ ವಚನವನ್ನು ನಿಭಾಯಿಸಿದಂತೆ. ಅನೇಕರು ಮಾತು ಕೊಡುತ್ತಾರೆ ಆದರೆ ನಿಭಾಯಿಸುವುದರಲ್ಲಿ ನಂಬರ್ ವಾರ್ ಆಗುತ್ತಾರೆ. ಹಾಗಾಗಿ ಸಂಕಲ್ಪ ಮತ್ತು ಕರ್ಮಗಳನ್ನು ಪ್ಲಾನ್ ಮತ್ತು ಪ್ರಾಕ್ಟಿಕಲ್ ಎರಡರಲ್ಲೂ ಸಮಾನ ರೂಪದಲ್ಲಿ ತನ್ನಿ. ತರಬಹುದಲ್ಲವೇ! ಉದ್ಯಮಿಗಳು(ವ್ಯಾಪಾರಸ್ಥರು) ಬಂದಿದ್ದಾರೆ. ವ್ಯಾಪಾರಸ್ಥರಿಗೆ ಬಿಸಿನೆಸ್ ಮಾಡುವುದು ಬರುತ್ತದೆ ಅಲ್ಲವೇ! ಜಮಾ ಮಾಡುವುದು ಗೊತ್ತಿದೆಯಲ್ಲವೇ! ಇಂಜಿನಿಯರ್ ಮತ್ತು ವಿಜ್ಞಾನಿಗಳು ಕೂಡ ಪ್ರಾಕ್ಟಿಕಲ್ ಆಗಿ ಕೆಲಸ ಮಾಡುತ್ತಾರೆ. ಮತ್ತು ಯಾರು, ರೂರಲ್ (ಗ್ರಾಮೀಣ ಪ್ರದೇಶದಲ್ಲಿದ್ದಾರೆ) ಆಗಿದ್ದಾರೆ ಬಾಪ್‌ದಾದಾ ಅವರನ್ನು "ರೂಲರ್" ಎನ್ನುತ್ತಾರೆ ಏಕೆಂದರೆ ಇವರು ಸೇವೆಯನ್ನು ಮಾಡದಿದ್ದರೆ ಯಾರೂ ಜ್ಞಾನ ಕೊಡಲು ಆಗುತ್ತಿರಲಿಲ್ಲ. ಆದ್ದರಿಂದ ಬಂದಿರುವ ಮೂರೂ ವಿಂಗ್ನವರು ಕಾರ್ಯ ಮಾಡುವವರಾಗಿದ್ದಾರೆ. ಹೇಳುವುದು ಮಾತ್ರ ಅಲ್ಲ, ಕಾರ್ಯರೂಪಕ್ಕೆ ತರುವವರಾಗಿದ್ದಾರೆ. ಹಾಗಾದರೆ ಎಲ್ಲಾ ವಚನಗಳನ್ನು ಕಾರ್ಯ ರೂಪದಲ್ಲಿ ನಿಭಾಯಿಸುವ ಆತ್ಮರಾಗಿದ್ದೀರಲ್ಲವೇ! ಅಥವಾ ವಚನ ಕೊಡುವವರು ಮಾತ್ರ ಆಗಿದ್ದೀರೋ? ಮಾತು ಕೊಡುವ ಸಮಯದಲ್ಲಿ ದೈರ್ಯವನ್ನು ತೋರಿಸಿ ಬಾಪ್‌ದಾದಾರವರನ್ನು ಖುಷಿಪಡಿಸುತ್ತೀರಿ. ಬಾಪ್‌ದಾದಾರವರ ಹತ್ತಿರ ಪ್ರತಿಯೊಬ್ಬ ಮಗುವಿನ 'ವಚನಗಳ' ಫೈಲ್ ಇದೆ. ಅಲ್ಲಿ (ಸೂಕ್ಷ್ಮವತನದಲ್ಲಿ) ವಚನಗಳ ಫೈಲ್ ಇಡುವುದಕ್ಕೆ ಅಲಮಾರಿ ಅಥವಾ ಸ್ಥಳ ಅಂತೂ ಬೇಕಾಗಿಲ್ಲ. ಕೆಲವೊಮ್ಮೆ ಬಾಪ್‌ದಾದಾ ತಮ್ಮ ಅಲೌಕಿಕ ಟಿ.ವಿಯನ್ನು ಆಕಸ್ಮಿಕವಾಗಿ ತೆರೆಯುತ್ತಾರೆ. ಯಾವಾಗಲೂ ತೆರೆದಿಟ್ಟಿರುವುದಿಲ್ಲ, ಆಕಸ್ಮಿಕವಾಗಿ ತೆರೆದಾಗ ಎಲ್ಲವೂ ಕೇಳುತ್ತದೆ. ಪರಸ್ಪರ ಮಾತನಾಡಿಕೊಳ್ಳುವುದು, ಕೇಳುತ್ತದೆ. ಆದ್ದರಿಂದ ಬಾಪ್‌ದಾದಾ ಹೇಳುತ್ತಾರೆ-- ವ್ಯರ್ಥವನ್ನು ಜಮಾದ ಖಾತೆಯಲ್ಲಿ ಜಮಾ ಮಾಡಿ.

ಬ್ರಾಹ್ಮಣ ಎಂದರೆ ಅಲೌಕಿಕರು. ಬ್ರಾಹ್ಮಣ ಜೀವನದ ಮಹತ್ವ ಬಹಳ ದೊಡ್ಡದಾಗಿದೆ. ತುಂಬಾ ದೊಡ್ಡ ಪ್ರಾಪ್ತಿಗಳಿವೆ. ಬಹಳ ದೊಡ್ಡ ಸ್ವಮಾನವಿದೆ ಮತ್ತು ಸಂಗಮದ ಸಮಯದಲ್ಲಿ ತಂದೆಯವರಾಗುವುದು ಇದು ದೊಡ್ಡದಕ್ಕಿಂತ ದೊಡ್ಡ, ಕೋಟಿಯಷ್ಟು ಭಾಗ್ಯವಾಗಿದೆ, ಆದ್ದರಿಂದ ಪ್ರತಿ ಖಜಾನೆಯ ಮಹತ್ವವಿದೆ ಎಂದು ಬಾಪ್‌ದಾದಾ ಹೇಳುತ್ತಾರೆ. ಎಲ್ಲರಿಗೆ ಭಾಷಣದಲ್ಲಿ ಸಂಗಮಯುಗದ ಎಷ್ಟೊಂದು ಮಹಿಮೆಯನ್ನು ಹೇಳುತ್ತೀರಿ. ಯಾರಾದರೂ ತಮಗೆ ಸಂಗಮಯುಗದ ಮಹಿಮೆಯ ಬಗ್ಗೆ ಟಾಪಿಕ್ ಕೊಟ್ಟರೆ ಎಷ್ಟು ಸಮಯ ಮಾತನಾಡುತ್ತೀರಿ? ಒಂದು ಗಂಟೆ ಮಾತನಾಡಲು ಸಾಧ್ಯವೇ? ಟೀಚರ್ಸ್ ಹೇಳಿ. ಯಾರಿಗೆ ಸಾಧ್ಯವಾಗುತ್ತದೆಯೋ ಅವರು ಕೈ ಎತ್ತಿ. ಹೇಗೆ ಬೇರೆಯವರಿಗೆ ಮಹತ್ವವನ್ನು ತಿಳಿಸುತೀರೋ, ಮಹತ್ವವನ್ನಂತೂ ತುಂಬಾ ಚೆನ್ನಾಗಿ ತಿಳಿದುಕೊಂಡಿದ್ದೀರಿ. ಮಹತ್ವ ಗೊತ್ತಿಲ್ಲ ಎಂದು ಬಾಪ್‌ದಾದಾರವರು ಹೇಳುತ್ತಿಲ್ಲ. ಗೊತ್ತಿರುವುದರಿಂದಲೇ ಹೇಳುತ್ತೀರಿ. ಮಾತ್ರ ಗೊತ್ತಿದೆಯೋ ಅಥವಾ ಮರ್ಜ್(ಗುಪ್ತ) ಆಗುತ್ತದೆಯೋ ಸ್ಮೃತಿ ಇಮರ್ಜ್(ಪ್ರತ್ಯಕ್ಷ) ರೂಪದಲ್ಲಿರಬೇಕು -- ಅದು ಕೆಲವೊಮ್ಮೆ ಕಡಿಮೆಯಾಗುತ್ತದೆ, ಕೆಲವೊಮ್ಮೆ ಜಾಸ್ತಿ ಆಗುತ್ತದೆ. ಆದ್ದರಿಂದ ತಮ್ಮ ಈಶ್ವರೀಯ ನಶೆಯನ್ನು ಪ್ರತ್ಯಕ್ಷ ಮಾಡಿಕೊಳ್ಳಿ. ಹಾಂ! ನಾನಂತೂ ಆಗಿಬಿಟ್ಟಿದ್ದೇನೆ... ಅಲ್ಲ. ಪ್ರ್ಯಾಕ್ಟಿಕಲ್ ಆಗಿದ್ದೇನೆ... ಇದು ಪ್ರತ್ಯಕ್ಷ ರೂಪದಲ್ಲಿರಲಿ. ನಿಶ್ಚಯ ಇದೆ ಆದರೆ ನಿಶ್ಚಯದ ಚಿನ್ಹೆಯಾಗಿದೆ -- 'ಆತ್ಮಿಕ

ನಶೆ'. ಆದ್ದರಿಂದ ಸದಾ ನಶೆ ಇರಲಿ. ಆತ್ಮಿಕ ನಶೆ-- ನಾನು ಯಾರು! ಈ ನಶೆ ಪ್ರತ್ಯಕ್ಷ ರೂಪದಲ್ಲಿದ್ದಾಗ ಮಾತ್ರ ಪ್ರತಿಯೊಂದು ಸೆಕೆಂಡ್ ಜಮಾ ಆಗುತ್ತಾ ಹೋಗುತ್ತದೆ.

ಇಂದು ಬಾಪ್‌ದಾದಾ ಮಕ್ಕಳ ಜಮಾದ ಖಾತೆಯನ್ನು ನೋಡಿದರು ಹಾಗಾಗಿ ಸಮಯದ ಪರಿವರ್ತನೆ ಆಕಸ್ಮಿಕವಾಗಿ ಆಗುವ ಬಗ್ಗೆ ವಿಶೇಷವಾಗಿ ಎಲ್ಲರ ಗಮನವನ್ನು ಸೆಳೆದರು ಪರಿವರ್ತನೆಯ ಬಗ್ಗೆ ತಿಳಿಸುತ್ತಲೇ ಇರುತ್ತಾರೆ. **ಹೀಗೆ ಯೋಚಿಸಬೇಡಿ - ಸಮಯ ಸರಿ ಮಾಡಿಬಿಡುತ್ತದೆ, ಅಥವಾ ಸಮಯಕ್ಕೆ ಸರಿಯಾಗಿ ಆಗಿಬಿಡುತ್ತೇವೆ. ಹೀಗೆ ಯಾರೂ ಸಮಯದ ಆಧಾರವನ್ನು ತೆಗೆದುಕೊಳ್ಳುತ್ತಾರೆಯೋ ಅವರ ಟೀಚರ್ ಯಾರು? ಸಮಯವೇ ಅಥವಾ ಸ್ವಯಂ ಪರಮಾತ್ಮನೇ? ಪರಮಾತ್ಮನಿಂದ ಸಂಪನ್ನರಾಗದೇ ಸಮಯ ಸಂಪನ್ನ ಮಾಡುತ್ತದೆ ಎಂದರೆ ಇದಕ್ಕೆ ಏನೆನ್ನುತ್ತಾರೆ? ಸಮಯ ತಮ್ಮ ಮಾಸ್ಟರ್ ಆಗಿದೆಯೋ ಅಥವಾ ಪರಮಾತ್ಮ ಶಿಕ್ಷಕರಾಗಿದ್ದಾರೆಯೇ? ಹಾಗಾಗಿ ಡ್ರಾಮಾದ ಅನುಸಾರ ಒಂದುವೇಳೆ ಸಮಯ ತಮಗೆ ಪಾಠ ಕಲಿಸಿದರೆ ಅಥವಾ ಸಮಯದ ಆಧಾರದ ಮೇಲೆ ಪರಿವರ್ತನೆಯಾದರೆ ಪ್ರಾಲಬ್ಧವು ಕೂಡ ಸಮಯಕ್ಕನುಸಾರವಾಗಿಯೇ ಸಿಗುತ್ತದೆ ಏಕೆಂದರೆ ಸಮಯ ತಮ್ಮ ಟೀಚರ್ ಆಗಿದೆ ಎಂದು ತಂದೆ ಹೇಳುತ್ತಾರೆ. ಸಮಯ ತಮ್ಮ ದಾರಿ ಕಾಯುತ್ತಿದೆ, ನೀವು ಸಮಯಕ್ಕಾಗಿ ಕಾಯಬೇಡಿ. ಅದು ರಚನೆಯಾಗಿದೆ ತಾವು ಮಾಸ್ಟರ್ ರಚಯಿತರಾಗಿದ್ದೀರಿ. ಆದ್ದರಿಂದ ರಚಿಸುವವರನ್ನು ರಚನೆ ಕಾಯಬೇಕು ತಾವು ಮಾಸ್ಟರ್ ರಚಯಿತರು ಸಮಯಕ್ಕಾಗಿ ಕಾಯಬೇಡಿ.** ಮತ್ತು ಕಠಿಣವಾದದ್ದು ಏನಿದೆ? ಸಹಜವಾದದ್ದನ್ನು ಸ್ವಯಂ ತಾವೇ ಕಠಿಣ ಮಾಡಿಕೊಳ್ಳುತ್ತೀರಿ. ಕಠಿಣವಾಗಿಲ್ಲ, ಕಠಿಣ ಮಾಡಿಕೊಳ್ಳುತ್ತೀರಿ ಭಾರವಾಗಿರುವುದನ್ನೆಲ್ಲ ತಂದೆಗೆ ಕೊಟ್ಟುಬಿಡಿ ಎಂದು ತಂದೆ ಹೇಳುತ್ತಾರೆ ಅಂದಾಗ ಕೊಡಲು ಬರುವುದಿಲ್ಲವೇ. ಭಾರವನ್ನು ಕೂಡ ಹೊತ್ತುಕೊಳ್ಳುತ್ತೀರಿ, ಆ ನಂತರ ದಣಿಯುತ್ತೀರಿ, ಆಮೇಲೆ ತಂದೆಗೆ ದೂರನ್ನು ಕೂಡ ಕೊಡುತ್ತೀರಿ-- ಏನು ಮಾಡುವುದು, ಹೇಗೆ ಮಾಡುವುದು... ಭಾರವನ್ನು ತಾವೇಕೆ ಹೊತ್ತು ಕೊಂಡಿದ್ದೀರಿ? ತಂದೆ ಆಫರ್ ಕೊಡುತ್ತಿದ್ದಾರೆ-- ತಮ್ಮ ಎಲ್ಲಾ ಭಾರವನ್ನು ತಂದೆಗೆ ಒಪ್ಪಿಸಿಬಿಡಿ. 63 ಜನ್ಮಗಳಿಂದ ಭಾರ ಹೊರುವುದು ಅಭ್ಯಾಸವಾಗಿಬಿಟ್ಟಿದೆ ಅಲ್ಲವೇ! ಅಭ್ಯಾಸದ ವಶ ಅಷ್ಟು ಬೇಗ ಬಿಡುವುದಿಲ್ಲ ಆದ್ದರಿಂದ ಪರಿಶ್ರಮ ಪಡಬೇಕಾಗುತ್ತದೆ. ಕೆಲವೊಮ್ಮೆ ಸಹಜ, ಕೆಲವೊಮ್ಮೆ ಕಠಿಣ ಪರಿಶ್ರಮ. ಯಾವುದೇ ಕಾರ್ಯ ಕೆಲವೊಮ್ಮೆ ಸಹಜವಾಗಿರುತ್ತದೆ ಅಥವಾ ಕೆಲವೊಮ್ಮೆ ಕಠಿಣವಾಗುತ್ತದೆ. ಕೆಲವೊಮ್ಮೆ ಸಹಜ ಕೆಲವೊಮ್ಮೆ ಕಠಿಣ ಏಕಾಗುತ್ತದೆ? ಯಾವುದಾದರೂ ಕಾರಣವಿರಬೇಕಲ್ಲವೇ? ಕಾರಣವಾಗಿದೆ-- ಅಭ್ಯಾಸದ ವಶ. ಹೀಗೆ ಮಕ್ಕಳು ಕಷ್ಟ ಪಡುವುದು ತಂದೆಗೆ ದೊಡ್ಡ ವಿಷಯವಾಗಿ ಕಾಣುತ್ತದೆ. ತಂದೆಗೆ ಇಷ್ಟವಾಗುವುದಿಲ್ಲ. ಮಾಸ್ಟರ್ ಸರ್ವ ಶಕ್ತಿವಾನ್ ಹಾಗೂ ಪರಿಶ್ರಮ ಪಡುತ್ತಾರೆಂದರೆ? ತಮಗೆ ತಾವು ಏನೆಂದು ಟೈಟಲ್ ಕೊಡುತ್ತೀರಿ? ಶ್ರಮಯೋಗಿ ಎಂದೋ ಅಥವಾ ಸಹಜಯೋಗಿ ಎಂದು ಕೊಡುತ್ತೀರಾ? ಅಥವಾ ನಾವು ಸಹಜ ಯೋಗಿಗಳಲ್ಲ ಎಂದು ತಮ್ಮ ಟೈಟಲನ್ನು ಬದಲಿಸಿಕೊಳ್ಳಿ. ಕೆಲವೊಮ್ಮೆ ಸಹಜಯೋಗಿ, ಕೆಲವೊಮ್ಮೆ ಹಠಯೋಗಿಗಳಾಗಿದ್ದೀರಾ? ಮತ್ತು ಯೋಗ ಎಂದರೆ ಏನು? ನೆನಪು ಮಾಡುವುದು ಅಷ್ಟೇ ತಾನೇ! ಹಾಗೂ ಶಕ್ತಿಶಾಲಿ ಯೋಗದ ಮುಂದೆ ಯಾವುದು ಪರಿಶ್ರಮ ಅನಿಸುವುದೇ ಇಲ್ಲ. ಯೋಗ ಕಿಚ್ಚು, ಬೆಂಕಿಯ ಕಿಡಿಯಾಗಿದೆ. ಅಗ್ನಿ ಎಂತಹ ಕಠಿಣ ವಸ್ತುವನ್ನಾದರೂ ಪರಿವರ್ತನೆ ಮಾಡುತ್ತದೆ. ಲೋಹವು ಕೂಡ ಮೋಲ್ಡ್ ಆಗುತ್ತದೆ. ಈ ಯೋಗದ ಅಗ್ನಿ ಕಷ್ಟವನ್ನು ಸಹಜ ಮಾಡಲು ಸಾಧ್ಯವಿಲ್ಲವೇ? ಕೆಲವು ಮಕ್ಕಳು ಬಹಳ ಚೆನ್ನಾಗಿ ತಿಳಿಸುತ್ತಾರೆ-- ಬಾಬಾ ಏನು ಮಾಡುವುದು, ವಾಯುಮಂಡಲವೇ ಹಾಗಿದೆ. ಜೊತೆಗಾರರು ಹೀಗಿದ್ದಾರೆ. ಹಂಸ ಹಾಗೂ

ಬಕಪಕ್ಷಿಗಳಂತಿದ್ದಾರೆ, ಏನು ಮಾಡುವುದು, ಹಿಂದಿನ ಲೆಕ್ಕಾಚಾರವಿದೆ. ಹೀಗೆ ಒಳ್ಳೊಳ್ಳೆಯ ಮಾತುಗಳನ್ನು ಹೇಳುತ್ತಾರೆ. ಆದರೆ ತಂದೆ ಕೇಳುತ್ತಾರೆ-- ತಾವು ಬ್ರಾಹ್ಮಣರು ಯಾವ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೀರಿ? ಜವಾಬ್ದಾರಿಯನ್ನಂತೂ ತೆಗೆದುಕೊಂಡಿದ್ದೀರಿ-- ವಿಶ್ವ ಪರಿವರ್ತನೆ ಮಾಡುತ್ತೇವೆ. ಹಾಗಾದರೆ ವಿಶ್ವವನ್ನೇ ಪರಿವರ್ತನೆ ಮಾಡುವವರು ತಮ್ಮ ಕಷ್ಟವನ್ನು ಪರಿಹರಿಸಿಕೊಳ್ಳಲು ಸಾಧ್ಯವಿಲ್ಲವೇ?

ಇಂದು ಏನು ಮಾಡಬೇಕು? ಕೂಡಿಡುವ(ಜಮಾದ) ಖಾತೆಯನ್ನು ಹೆಚ್ಚಿಸಿಕೊಳ್ಳಿ. ಸಹಜಯೋಗಿಗಳು ಸಹಜ ಯೋಗದ ಅನುಭವ ಮಾಡುತ್ತೀರಾ. ಕೆಲವೊಮ್ಮೆ ಸಹಜ, ಕೆಲವೊಮ್ಮೆ ಕಠಿಣ ಹೀಗಾದರೆ ಮಜಾ ಅನಿಸುವುದಿಲ್ಲ. ಮೋಜಿನಲ್ಲಿ ಇರುವುದೇ ಬ್ರಾಹ್ಮಣ ಜೀವನ. ಸಂಗಮಯುಗವು ಮೋಜಿನ ಯುಗವಾಗಿದೆ. ಭಾರ ಹೊರುವ ಯುಗವಲ್ಲ. ಭಾರ ಇಳಿಸುವ ಯುಗ. ತಮ್ಮ ಅದೃಷ್ಟದ ಚಿತ್ರಣವನ್ನು ಜ್ಞಾನದ ಕನ್ನಡಿಯಲ್ಲಿ ಸರಿಯಾಗಿ ನೋಡಿ ಪರಿಶೀಲಿಸಿಕೊಳ್ಳಿ. ಕನ್ನಡಿಯಂತು ಇದೆ ಅಲ್ಲವೇ? ಅಥವಾ ಇಲ್ಲವೋ? ಒಡೆದು ಹೋಗಿಲ್ಲ ತಾನೇ? ಎಲ್ಲರಿಗೂ ಕನ್ನಡಿ ಸಿಕ್ಕಿದೆಯೇ? ಮಾತೆಯರೇ, ಕನ್ನಡಿ ಸಿಕ್ಕಿದೆಯೇ ಅಥವಾ ಕಳೆದುಹೋಗಿದೆಯೇ? ಪಾಂಡವರು ಸರಿಯಾಗಿ ಇಟ್ಟುಕೊಳ್ಳುವುದರಲ್ಲಿ ಜಾಣರು ತಾನೇ? ಕನ್ನಡಿ ಇದೆಯೇ? ಕೈಯನ್ನಂತೂ ಚೆನ್ನಾಗಿ ಎತ್ತುತ್ತಿರಿ. ಒಳ್ಳೆಯದು. ಅದೃಷ್ಟದ ಚಿತ್ರಣವನ್ನು ನೋಡಿ ಮತ್ತು ಸದಾ ತಮ್ಮ ಅದೃಷ್ಟದ ಚಿತ್ರಣವನ್ನು ನೋಡಿ ವಾಹ್, ವಾಹ್! ಎಂಬ ಗೀತೆಯನ್ನು ಹಾಡಿರಿ. ವಾಹ್ ನನ್ನ ಅದೃಷ್ಟ! ವಾಹ್ ನನ್ನ ಬಾಬಾ! ವಾಹ್ ನನ್ನ ಪರಿವಾರ! ಪರಿವಾರ ಕೂಡ ವಾಹ್, ವಾಹ್! ಆಗಿದೆ. ಹಾಗಲ್ಲ ಇವರು, ಇವರಂತೂ ಬಹಳ ವಾಹ್ ಆಗಿದ್ದಾರೆ, ಇವರು ಸ್ವಲ್ಪ ಹೀಗಿದ್ದಾರೆ, ಅಲ್ಲ. ವಾಹ್ ನನ್ನ ಪರಿವಾರ? ವಾಹ್ ನನ್ನ ಭಾಗ್ಯ! ಮತ್ತು ವಾಹ್ ನನ್ನ ಬಾಬಾ! ಬ್ರಾಹ್ಮಣ ಜೀವನವೇ ವಾಹ್, ವಾಹ್! ಅಯ್ಯೋ, ಅಯ್ಯೋ ಅಲ್ಲ. ಶರೀರದ ವ್ಯಾದಿಯಲ್ಲೂ ಅಯ್ಯೋ ಅಯ್ಯೋ ಎನ್ನಬಾರದು ವಾಹ್! ಇದು ನನ್ನ ಭಾರವನ್ನು ಇಳಿಸುತ್ತಿದೆ. ಒಂದುವೇಳೆ 10 ಮಣದಿಂದ 3-4 ಮಣ ತಮ್ಮ ಭಾರ ಇಳಿದರೆ ಒಳ್ಳೆಯದೋ ಅಥವಾ ಅಯ್ಯೋ ಅಯ್ಯೋ ಎನ್ನುತ್ತೀರೋ? ಏನೆನ್ನುತ್ತಿರಿ? ವಾಹ್ ಭಾರ ಇಳಿಯಿತು! ಅಯ್ಯೋ ನನ್ನ ಪಾತ್ರವೇ ಹೀಗಿದೆ, ಅಯ್ಯೋ ನನ್ನನ್ನು ವ್ಯಾಧಿ ಬಿಡುವುದೇ ಎನ್ನುವುದಲ್ಲ! ನೀವು ಬಿಡುತ್ತಿರೋ ಅಥವಾ ವ್ಯಾಧಿ ಬಿಡಬೇಕೋ? ವಾಹ್ ವಾಹ್ ಅನ್ನುತ್ತಾ ಇರಿ ಆಗ ವಾಹ್ ಅನ್ನುವುದರಿಂದ ವ್ಯಾಧಿ ಕೂಡ ಖುಷಿಯಾಗುತ್ತದೆ. ನೋಡಿ, ಇಲ್ಲಿಯೂ ಹಾಗೆ ಆಗುತ್ತದೆ ಅಲ್ಲವೇ, ಯಾರನ್ನಾದರೂ ಹೊಗಳುವಾಗ ವಾಹ್ ವಾಹ್ ಎನ್ನುತ್ತೇವೆ. ಆದ್ದರಿಂದ ವ್ಯಾಧಿಗೂ ವಾಹ್ ವಾಹ್ ಎನ್ನಿರಿ. ಅಯ್ಯೋ ಇದು ನನ್ನ ಹತ್ತಿರವೇ ಏಕೆ ಬಂದಿದೆ, ನನ್ನದೇ ಲೆಕ್ಕಾಚಾರವಿದೆ! ಪ್ರಾಪ್ತಿಯ ಮುಂದೆ ಲೆಕ್ಕಾಚಾರ ಏನು ಅಲ್ಲ. ಪ್ರಾಪ್ತಿಗಳನ್ನು ಹಾಗೂ ಲೆಕ್ಕಾಚಾರಗಳನ್ನು ಮುಂದಿಟ್ಟುಕೊಳ್ಳಿ, ಆಗ ಏನನಿಸುತ್ತದೆ? ಲೆಕ್ಕಾಚಾರ ತುಂಬಾ ಸಣ್ಣದಾಗಿ ಕಾಣುತ್ತದೆ. ಅಂದರೆ ಬ್ರಾಹ್ಮಣ ಜೀವನದಲ್ಲಿ ಏನೇ ಆಗಲಿ ಸಕಾರಾತ್ಮಕ ರೂಪದಲ್ಲಿ ನೋಡಿರಿ. ನಕಾರಾತ್ಮಕ ಹಾಗೂ ಸಕಾರಾತ್ಮಕ ಹೇಗೆ ಎಂದು ಗೊತ್ತಿದೆಯಲ್ಲವೇ. ನಕಾರಾತ್ಮಕ ಹಾಗೂ ಸಕಾರಾತ್ಮಕಗಳ ಬಗ್ಗೆ ಕೋರ್ಸ್ ಕೂಡ ಮಾಡುತ್ತೀರಲ್ಲವೇ! ಆ ಸಮಯದಲ್ಲಿ ತಮಗೆ ತಾವೇ ಕೋರ್ಸ್ ಮಾಡಿಕೊಳ್ಳಿ ಆಗ ಕಷ್ಟವು ಸಹಜವಾಗುತ್ತದೆ. ಕಷ್ಟ ಎಂಬ ಶಬ್ದ ಬ್ರಾಹ್ಮಣರ ಡಿಕ್ಷನರಿಯಲ್ಲಿ ಇರಬಾರದು. ಒಳ್ಳೆಯದು - ಯಾವುದೇ ಲೆಕ್ಕಾಚಾರವಿದ್ದರೂ, ಆತ್ಮನೊಂದಿಗೆ, ಶರೀರದೊಂದಿಗೆ ಹಾಗೂ ಪ್ರಕೃತಿಯೊಂದಿಗೆ ಇರುತ್ತದೆ ಏಕೆಂದರೆ ಪ್ರಕೃತಿಯ ಐದು ತತ್ವಗಳು ಅನೇಕ ಬಾರಿ ಕಷ್ಟದ ಅನುಭವ ಮಾಡಿಸುತ್ತವೆ. ಯಾವುದೇ ಲೆಕ್ಕಾಚಾರಗಳನ್ನು ಯೋಗಾಗ್ನಿಯಲ್ಲಿ ಭಸ್ಮ ಮಾಡಿಕೊಳ್ಳಿರಿ. ಏನು ಮಾಡಬೇಕೆಂದು ಅರ್ಥವಾಯಿತೆ? ಜಮಾದ ಖಾತೆಯನ್ನು ಹೆಚ್ಚಿಸಿರಿ. ಮಾತುಗಳಲ್ಲೂ ಸಾಧಾರಣ

ಪದಗಳು ಇರಬಾರದು ಮಾತುಗಳಲ್ಲೂ ವಿವಿಧ ಭಾವ ಮತ್ತು ಭಾವನೆ ಇರುತ್ತವೆ ಹಾಗೂ ಮಾತುಗಳಿಂದ ಭಾವ ಮತ್ತು ಭಾವನೆಯ ಬಗ್ಗೆ ತಿಳಿದುಬಿಡುತ್ತದೆ, ಆದ್ದರಿಂದ ಸದಾ ಯಾವುದೇ ಮಾತನಾಡಿದರೂ ಅದರಲ್ಲಿ ಯಾವಾಗಲೂ ಆತ್ಮಿಕ ಭಾವ ಮತ್ತು ಶುಭ ಹಾಗೂ ಶ್ರೇಷ್ಠ ಭಾವನೆ ಇರಬೇಕು. ಮಾತು ಹಾಗೂ ಭಾವನೆ ಕೂಡ. ಈರ್ಷ್ಯೆ, ದ್ವೇಷ ಹಾಗೂ ತಿರಸ್ಕಾರ ಇವು ಮಾಯೆಯ ಭಾವನೆಗಳಾಗಿವೆ. ಸದಾ ಶುಭ ಭಾವ ಹಾಗೂ ಭಾವನೆಯಿರಬೇಕು. ಹೀಗಿದೆಯೇ? ಪರಿಶೀಲಿಸಿಕೊಳ್ಳಿರಿ. ಸಮಯದ ಖಜಾನೆ, ಮಾತಿನ ಖಜಾನೆ, ಸಂಕಲ್ಪಗಳ ಖಜಾನೆ, ಶಕ್ತಿಗಳ ಖಜಾನೆ, ಜ್ಞಾನದ ಖಜಾನೆ, ಗುಣಗಳ ಖಜಾನೆ... ಒಂದೊಂದು ಖಜಾನೆಯನ್ನು ಪರಿಶೀಲಿಸಿಕೊಳ್ಳಿ ಏಕೆಂದರೆ ಪ್ರತಿಯೊಂದು ಖಜಾನೆಯ ಖಾತೆಯನ್ನು ಜಮಾ ಮಾಡಬೇಕು. ಈ ಎಲ್ಲಾ ಖಜಾನೆಗಳ ಖಾತೆಯು ತುಂಬಿ ತುಳುಕುತ್ತಿದ್ದರೆ ಸಂಪೂರ್ಣ ಅಂಕಗಳು ಅರ್ಥಾತ್ ಪಾಸ್ ವಿಥ್ ಆನರ್ ಆಗುತ್ತೀರಿ. ಒಂದು ಖಜಾನೆ ಕಡಿಮೆ ಜಮಾ ಆದರೆ ಏನಾಗುತ್ತದೆ? ಎಂದು ಯೋಚಿಸಬೇಡಿ. ಏಕೆಂದರೆ ಪಾಸ್ ವಿತ್ ಆನರ್( ಡಿಸ್ಟಿಂಕ್ಷನ್) ಆಗಲು ಎಲ್ಲಾ ಖಜಾನೆಗಳ ಖಾತೆಯೂ ತುಂಬಿ ತುಳುಕುತ್ತಿರಬೇಕು.

ಬಾಪ್‌ದಾದಾ ಎದುರಿಗೆ ಕುಳಿತಿರುವ ನಿಮ್ಮನ್ನು ಮಾತ್ರ ನೋಡುತ್ತಿಲ್ಲ. ದೇಶ ವಿದೇಶದಲ್ಲಿರುವ ಮಕ್ಕಳೆಲ್ಲರನ್ನೂ ನೋಡುತ್ತಿದ್ದಾರೆ. ಎಲ್ಲರೂ ಸಮ್ಮುಖದಲ್ಲಿ ಇಲ್ಲ ಆದರೆ ಮನಸ್ಸಿನಲ್ಲಿ ಇದ್ದಾರೆ ಇಂದು ನೀವು ಸಮ್ಮುಖದಲ್ಲಿ ಇದ್ದೀರಿ, ನಾಳೆ ಇನ್ನೊಬ್ಬರು ಇರುತ್ತಾರೆ ಹಾಗೆಂದು ಬಾಪ್‌ದಾದಾ ನಿಮ್ಮನ್ನು ನೋಡುತ್ತಿಲ್ಲ ಎಂದು ತಿಳಿಯಬೇಡಿರಿ. ಅವರು ಮನಸ್ಸಿನಲ್ಲಿ ಇದ್ದಾರೆ ಮತ್ತು ನೀವು ಎದುರುಗಡೆ ಇದ್ದೀರಿ ಹಾಗೆಂದು ನೀವು ಮನಸ್ಸಿನಲ್ಲಿ ಇಲ್ಲ ಎಂದಲ್ಲ. ಎದುರುಗಡೆ ಇರುವುದರಲ್ಲಿ ಶ್ರೇಷ್ಠತೆ ಇರುತ್ತದೆ ಅಲ್ಲವೇ. ಅರ್ಥವಾಯಿತೆ? ಒಳ್ಳೆಯದು.

ವ್ಯಾಪಾರಸ್ಥರು(ಉದ್ಯಮಿ) ಕೈಯನ್ನೆತ್ತಿರಿ. ಉದ್ಯಮಿಗಳು ಏನನ್ನು ಯೋಚಿಸುತ್ತಿದ್ದೀರಿ ವಿಶೇಷವಾಗಿ ನಿಮಗೆ ಅವಕಾಶ ಲಭಿಸಿದೆ ವ್ಯಾಪಾರಸ್ಥರು ತಂದೆಯಂದಿಗೂ ಸಹ ವ್ಯಾಪಾರ ಮಾಡಿರಿ. ನೀವು ವ್ಯಾಪಾರ ಮಾಡಿದ್ದೀರಿ ಒಳ್ಳೆಯದು ಆದರೆ ಇತರರಿಂದ ಕೂಡ ತಂದೆಯೊಂದಿಗೆ ವ್ಯಾಪಾರವನ್ನು ಮಾಡಿಸಿರಿ ಏಕೆಂದರೆ ಇಂದಿನ ದಿನ ವ್ಯಾಪಾರಸ್ಥರೆಲ್ಲರೂ ಬಹಳ ಆಂದೋಲನೆಯಲ್ಲಿ ಇದ್ದಾರೆ. ಏಕೆಂದರೆ ಸಮಯಾನುಸಾರ ವ್ಯಾಪಾರ ಕೆಳಗಿಳಿಯುತ್ತಿದೆ ಆದ್ದರಿಂದ ಎಷ್ಟೇ ಹಣವಿದ್ದರೂ ಆ ಹಣ ಏನಾಗುತ್ತದೆಯೋ ಎಂಬ ಚಿಂತೆ ಇದೆ ಆದ್ದರಿಂದ ಅವರನ್ನು ಚಿಂತೆಯಿಂದ ತೊಲಗಿಸಿ. ಅವಿನಾಶಿ ಖಜಾನೆಯ ಶ್ರೇಷ್ಠತೆಯನ್ನು ತಿಳಿಸಿರಿ ಆದ್ದರಿಂದ ಚಿಕ್ಕ ವ್ಯಾಪಾರಸ್ಥರಾದರೂ, ದೊಡ್ಡ ವ್ಯಾಪಾರಸ್ಥರಾದರೂ ಬಂದಿರುವ ವ್ಯಾಪಾರಸ್ಥರೆಲ್ಲರೂ ನಿಮ್ಮ ಜೊತೆ ಇರುವವರ ಸಂತೋಷಕ್ಕೆ ಮಾರ್ಗವನ್ನು ತಿಳಿಸಿರಿ. ಇಲ್ಲಿಗೆ ಬಂದಿರುವ ವ್ಯಾಪಾರಸ್ಥರಿಗೆ ಚಿಂತೆ ಇದೆಯೇ ಏನಾಗುತ್ತದೆಯೋ, ಹೇಗಾಗುತ್ತದೆಯೋ ಎಂಬ ಚಿಂತೆ ಇದೆಯೇ? ಚಿಂತೆ ಇಲ್ಲದಿದ್ದರೆ ಕೈಯನ್ನು ಎತ್ತಿರಿ. ನಾಳೆ ಏನಾದರೂ ಆದರೆ ನಿಶ್ಚಿಂತ ಚಕ್ರವರ್ತಿಯಾಗಿ ಇರುತ್ತೀರಾ? ವ್ಯಾಪಾರಸ್ಥರು ನಿಶ್ಚಿಂತ ಚಕ್ರವರ್ತಿಗಳೆನಾ? ಸ್ವಲ್ಪ ಜನರೇ ಕೈ ಎತ್ತುತ್ತಿದ್ದಾರೆ. ಸ್ವಲ್ಪ ಸ್ವಲ್ಪ ಚಿಂತೆ ಇರುವವರು ಕೈಯನ್ನು ಎತ್ತಬಲ್ಲಿರಾ ಅಥವಾ ನಾಚಿಕೆಯಾಗುತ್ತಿದೆಯೇ? ಬಾಪ್‌ದಾದಾರವರಂತೂ ನಿಶ್ಚಿಂತ ಚಕ್ರವರ್ತಿಗಳೆಂದು ಬಿರುದನ್ನು ಕೊಟ್ಟಿದ್ದಾರೆ. ವಿಷಯಗಳು ಬರುವುದಂತೂ ತಪ್ಪುವುದಿಲ್ಲ ಬರುತ್ತವೆ ಆದರೆ ಯಾವಾಗ ಇಂತಹ ವಿಷಯ ಬಂದರೂ.ನೀವು ನಿಶ್ಚಿಂತಪುರಿಗೆ ಹೋಗಿಬಿಡಬೇಕು. ನಿಶ್ಚಿಂತಪುರಿಯಲ್ಲಿ ಕುಳಿತುಕೊಂಡರೆ ಚಕ್ರವರ್ತಿಯಾಗಿ ಬಿಡುತ್ತೀರಿ ಮತ್ತು ನಿಶ್ಚಿಂತಾಪುರಿಯಲ್ಲಿ ಕೂಡ ಇರುತ್ತೀರಿ. ಹಳೆಯ ಪ್ರಪಂಚ ಹೋಗಿಬಿಡಬೇಕು ಹೊಸ ಪ್ರಪಂಚ ಬರಬೇಕೆಂದು ನೀವೇ

ಆಹ್ವಾನಿಸಿದ್ದೀರಿಲ್ಲವೇ. ಮತ್ತೆ ಹೇಗೆ ಬರುತ್ತದೆ ಏರುಪೇರು ಆದರೆ ಹಳೆಯ ಪ್ರಪಂಚ ಹೋಗುತ್ತದೆ ಅಲ್ಲವೇ? ಆದ್ದರಿಂದ ಏನು ಹೋದರು ನೀವು ನಿಶ್ಚಿಂತೆಯಿಂದ ಇರಬೇಕು. ಹಳೆಯ ಪ್ರಪಂಚ ಹೋಗಬೇಕೆಂದು ನೀವೇ ಆಹ್ವಾನಿಸಿದ್ದರಲ್ಲವೇ ಹಾಗಿದ್ದಾಗ ಹಳೆಯ ಪ್ರಪಂಚದಲ್ಲಿ ಮತ್ತು ಹಳೆಯ ಮನೆಯಲ್ಲಿ ಏನು ನಡೆಯುತ್ತದೆ. ಒಮ್ಮೊಮ್ಮೆ ಒಂದೊಂದು ವಸ್ತು ಕೆಟ್ಟು ಹೋಗುತ್ತಿರುತ್ತದೆ. ಕೆಲವೊಮ್ಮೆ ಕೆಲವು ವಸ್ತುಗಳು ಬೀಳುತ್ತಲೇ ಇರುತ್ತವೆ.  ಆದ್ದರಿಂದ ಈಗ ನಡೆಯುವುದೇನು ಹೊಸದಲ್ಲ. ಪ್ರತಿಯೊಂದು ವಿಷಯದಲ್ಲಿ ಬ್ರಹ್ಮಾ ತಂದೆ ಹೊಸದೇನು ಅಲ್ಲ (ನಥಿಂಗ್ ನ್ಯೂ) ಎಂದು ಹೇಳುತ್ತಿದ್ದರು. ನಡೆಯಬೇಕಾಗುತ್ತದೆ. ನಡೆಯುತ್ತಿದೆ. ಆದರೆ ನಾವು ನಿಶ್ಚಿಂತಾ ಚಕ್ರವರ್ತಿಗಳು. ಇಂತಹ ನಿಶ್ಚಿಂತ ಚಕ್ರವರ್ತಿಗಳೇನಾ? ನಿಶ್ಚಿಂತ ಚಕ್ರವರ್ತಿಗಳಾದರೆ ದಿವಾಳಾ ಏಳುವವರೂ ಸಹ ರಕ್ಷಿಸಲ್ಪಡುತ್ತೀರಿ. ಚಿಂತೆಯಲ್ಲಿದ್ದು ಸರಿಯಾದ ನಿರ್ಣಯವನ್ನು ತೆಗೆದುಕೊಳ್ಳಲಿಲ್ಲವೆಂದರೆ ಒಂದು ದಿನದಲ್ಲಿಯೇ ಹೇಗಿರುವವರು ಹೇಗೆ ಆಗುತ್ತಾರೆ ಎಂದು ತಿಳಿದಿರುವಿರಲ್ಲವೇ? ಆದ್ದರಿಂದ ನಿಶ್ಚಿಂತೆಯಿಂದ ಇದ್ದಾಗ ಒಳ್ಳೆಯ ನಿರ್ಣಯವನ್ನು ತೆಗೆದುಕೊಳ್ಳಬಲ್ಲಿರಿ. ಆಗ ರಕ್ಷಿಸಲ್ಪಡುತ್ತೀರಿ. ಈಗ ಈ ಸಮಯವನ್ನು ಅನುಸರಿಸಿ ಇದು ಮಾಡಬೇಕೋ ಬೇಡವೋ ಎಂಬ ಪ್ರೇರಣೆಯೂ ಸಿಗುತ್ತಿದೆ. ಆದ್ದರಿಂದ ಚಿಂತೆ ಇದ್ದರೆ ವ್ಯಾಪಾರವೂ ಬಿದ್ದು ಹೋಗುತ್ತದೆ ಮತ್ತು ನಿಮ್ಮ ಸ್ಥಿತಿಯೂ ಕೆಳಗಿಳಿಯುತ್ತದೆ. ಆದ್ದರಿಂದ ಸದಾ ನಿಶ್ಚಿತ ಚಕ್ರವರ್ತಿಗಳು ಎಂದು ನೆನಪಿಟ್ಟುಕೊಳ್ಳಿರಿ ಆಗ ಚಿಂತೆಯ ವಿಷಯವೂ ಸಹ ಬದಲಾಗಿ ಬಿಡುತ್ತದೆ.  ಧೈರ್ಯವನ್ನು ಬಿಡಬಾರದು ಮಾನಸಿಕವಾಗಿ ಬಲಹೀನವಾಗಬಾರದು. ಧೈರ್ಯದಿಂದ ತಂದೆಯ ಸಹಾಯ ಲಭಿಸುತ್ತಿರುತ್ತದೆ. ನಿಮಗೆ ಸಹಾಯ ಮಾಡಲು ತಂದೆಯು ಬಂಧಿಸಲ್ಪಟ್ಟಿದ್ದಾರೆ ಆದರೆ ಧೈರ್ಯಹೀನರಿಗೆ ಸಹಾಯಕಾರಿಯಲ್ಲ.  ತಂದೆಯ ಸಹಾಯ ನಮಗೆ ಲಭಿಸುತ್ತಿಲ್ಲ ಎಂದು ತಿಳಿಯುತ್ತೀರಿ ಆದರೆ ನನಗೆ ಧೈರ್ಯವಿದೆಯೇ? ಎಂದು ನೀವು ಯೋಚಿಸಿರಿ. ಧೈರ್ಯ ಮಕ್ಕಳದು ಸಹಾಯ ತಂದೆಯದು ಅರ್ಧ ವಿಷಯವನ್ನು ಹಿಡಿದಿಟ್ಟುಕೊಳ್ಳಬಾರದು ತಂದೆಯ ಸಹಾಯವು ಬೇಕಲ್ಲವೇ? ಎಂದು. ಆದರೆ ಧೈರ್ಯವೂ ಇರಬೇಕು ಮಾನಸಿಕವಾಗಿ ಬಲಹೀನವಾಗದೆ ಧೈರ್ಯವಿಟ್ಟುಕೊಂಡು ನಡೆದರೆ ಗುಪ್ತವಾಗಿ ಸಹಾಯವು ಸಿಗುತ್ತದೆ. ಆದರೆ ಹೇಳಿರಿ ಇಲ್ಲಿರುವ  ವ್ಯಾಪಾರಸ್ತರೆಲ್ಲರೂ ಹೇಳಿರಿ. ಯಾರು ನೀವು? ನಿಶ್ಚಿಂತ ಚಕ್ರವರ್ತಿಗಳೇನಾ? ಇದನ್ನು ನೆನಪಿಟ್ಟುಕೊಳ್ಳಬೇಕು. ಧೈರ್ಯವನ್ನು ಎಂದೂ ಬಿಡಬಾರದು. ಏನಾದರೂ ಆಗಲಿ ಸಹಾಯವು ಸಿಗುತ್ತದೆ. ಆದರೆ ಅರ್ದ ನೆನಪಿಟ್ಟುಕೊಳ್ಳುವುದಲ್ಲ, ಪೂರ್ತಿಯಾಗಿ ನೆನಪಿಟ್ಟುಕೊಳ್ಳಿರಿ. ಒಳ್ಳೆಯದು. ಮಾತೆಯರು ವ್ಯಾಪಾರಸ್ಥರೇ ತಾನೇ? (ಹೌದು) ಹಾಗಾದರೆ ಮಾತೆಯರು ನಿಶ್ಚಿಂತ ಚಕ್ರವರ್ತಿಗಳೇನಾ? ನೌಕರರಾಗಬಾರದು. ಯಜಮಾನಿ ಮತ್ತು ಚಕ್ರವರ್ತಿಯಾಗಿರಬೇಕು. ಚಿಂತೆ ಇದ್ದರೆ ಉದಾಸೀನವಾಗಿ ಇರುತ್ತೀರಿ.

ಉದಾಸೀನವಾಗಿರುವುದು ಎಂದರೆ ದಾಸಿಯಾಗುವುದು ಆದ್ದರಿಂದ ಚಕ್ರವರ್ತಿ ಆಗಬೇಕು. ಒಳ್ಳೆಯದು. ಮೊದಲಬಾರಿ ಬಂದಿರುವ ಹೊಸಬರು ಕೈ ಎತ್ತಿರಿ. ಡ್ರಾಮಾನುಸಾರ ಈಗ ಬಂದಿದ್ದೀರಿ ಆದರೆ ಬಾಪ್‌ದಾದಾರವರ ಸ್ಲೋಗನ್ ಸ್ಮೃತಿ ಇದೆಯೇ? ಲಾಸ್ಟ್ ಸೋ ಫಾಸ್ಟ್, ಫಾಸ್ಟಾಗಿ(ವೇಗವಾಗಿ) ಹೋಗಿ ಫಸ್ಟ್ ಬರಬಹುದು. ಅವಕಾಶವಿದೆ ಫಸ್ಟ್ ಗೆ ಹೋಗಬಲ್ಲಿರಾ? ಆದರೆ ಜಮಾದ ಖಾತೆಯನ್ನು ಹೆಚ್ಚು ಹೆಚ್ಚಾಗಿ ಬೆಳೆಸಿಕೊಳ್ಳಬೇಕು. ನಿಮ್ಮ ಭಾಗ್ಯದ ಸ್ಮೃತಿ ಇರುತ್ತದೆ ಅಲ್ಲವೇ? ವಿಶೇಷವಾಗಿ ಹೊಸಬರಿಗೆ ಹೇಳುತ್ತಿದ್ದೇನೆ. ಯಾರಿಗಾದರೆ ಭಾಗ್ಯದ ಸ್ಮೃತಿ ಇರುತ್ತದೆಯೋ ಅವರು ಕೈಯನ್ನು ಎತ್ತಿರಿ. ಒಳ್ಳೆಯದು. ಯಾರಿಗಾದಾರೆ ಒಂದು ಕ್ಷಣದಲ್ಲಿ ನಿಮ್ಮ ಸಂಕಲ್ಪಗಳನ್ನು ಎಲ್ಲಿ ಬೇಕೆಂದರೆ ಅಲ್ಲಿ, ಯಾವುದು ಬೇಕೆಂದರೆ ಅದನ್ನೇ ಯೋಚಿಸಬಲ್ಲೆವು ಎಂದು ಭಾವಿಸುವವರು ಕೈಯನ್ನು ಎತ್ತಿರಿ. ಒಂದು ಕ್ಷಣದಲ್ಲಿ

ಕಂಟ್ರೋಲ್ ಆಗಿ ಬಿಡಬೇಕು. ಕ್ಷಣದಲ್ಲಿ ಹೀಗಾಗುತ್ತಿದೆಯೇ? ಹಾಗೆ ಮಾಡಬಲ್ಲಿರಾದರೆ ಕೈಯನ್ನು ಎತ್ತಿರಿ, ಆಗುತ್ತದೆ ಎಂದು ಹೇಳಿಬಿಡುವುದಲ್ಲ, ಕಂಟ್ರೋಲ್ ಆದರೆ ಮಾತ್ರ ಕೈಯನ್ನು ಎತ್ತಿರಿ. ಕೈಯನ್ನು ಎತ್ತದೇ ಇರುವವರಿಗೆ ಒಂದು ನಿಮಿಷ ಹಿಡಿಸುತ್ತಿದೆಯೇ ಅಥವಾ ಅಷ್ಟಕ್ಕಿಂತಲೂ ಹೆಚ್ಚು ಸಮಯ ಹಿಡಿಸುತ್ತಿಡಿಯೇ? ಈಗ ಈ ಅಭ್ಯಾಸ ಬಹಳ ಅವಶ್ಯಕ ಏಕೆಂದರೆ ಅಂತಿಮ ಸಮಯದಲ್ಲಿ ಈ ಅಭ್ಯಾಸ ಬಹಳಷ್ಟು ಕೆಲಸಕ್ಕೆ ಬರುತ್ತದೆ. ಈ ಶರೀರದ ಅವಯವಗಳಾದ ಕೈ, ಕಾಲುಗಳನ್ನು ಕ್ಷಣದಲ್ಲಿ ಎಲ್ಲಿಗೆ ಬೇಕೆಂದರೆ ಅಲ್ಲಿಗೆ ಕರೆದೊಯ್ಯುತ್ತಿದ್ದೇವೆ. ಅದೇ ರೀತಿಯಾಗಿ ಮನಸ್ಸು ಮತ್ತು ಬುದ್ಧಿಯನ್ನು ಸಹ ನನ್ನವೂ ಎಂದು ತಿಳಿಯುತ್ತಿದ್ದೀರಲ್ಲವೇ? ಮನಸ್ಸಿಗೆ ಅಧಿಕಾರಿಗಳಾದಾಗ ಈ ಸೂಕ್ಷ್ಮ ಕರ್ಮೇಂದ್ರಿಯಗಳ ಮೇಲೆ ಹಿಡಿತ ಏಕೆ ಇರುತ್ತಿಲ್ಲ? ಸಂಸ್ಕಾರಗಳ ಮೇಲೆ ಕೂಡ ಕಂಟ್ರೋಲ್ ಇರಬೇಕು. ಯಾವಾಗ ಬೇಕೆಂದರೆ, ಹೇಗೆ ಬೇಕೆಂದರೆ ಹಾಗೆ ಈ ಅಭ್ಯಾಸ ಪಕ್ಕಾ ಆಗಿ ಇದ್ದಾಗ ಮಾತ್ರ ಪಾಸ್ ವಿತ್ ಆನರ್ ಆಗುತ್ತೀರಿ. ತಯಾರಾಗಬೇಕಾಗಿರುವುದು ಲಕ್ಷ್ಮಿ ನಾರಾಯಣರಾಗಿ ಆದ್ದರಿಂದ ರಾಜ್ಯವನ್ನು ಕಂಟ್ರೋಲ್ ಮಾಡುವ ಮೊದಲು ಸ್ವರಾಜ್ಯ ಅಧಿಕಾರಿಯಾದಾಲೇ ರಾಜ್ಯಾಧಿಕಾರಿ ಆಗುತ್ತೀರಿ. ಇದಕ್ಕೂ ಸಹ ಸಾಧನವು ಇದೇ ಆಗಿದೆ-ಜಮಾದ ಖಾತೆಯನ್ನು ಹೆಚ್ಚಿಸಿರಿ ತಿಳಿಯಿತೇ? ಒಳ್ಳೆಯದು. ಈ ವಾಯುಮಂಡಲದಲ್ಲಿ ಮಧುಬನದಲ್ಲಿ ಕುಳಿತುಕೊಂಡಿದ್ದೀರಿ. ಮಧುಬನದ ವಾಯುಮಂಡಲವು ಶಕ್ತಿಶಾಲಿ, ಈ ವಾಯುಮಂಡಲದಲ್ಲಿ, ಈ ಸಮಯದಲ್ಲಿ ಮನಸ್ಸನ್ನು ಕಂಟ್ರೋಲ್ ಮಾಡಬಲ್ಲಿರಾ? ನಿಮಿಷದಲ್ಲಿ ಮಾಡಿರಿ ಅಥವಾ ಸೆಕೆಂಡಿನಲ್ಲಿ ಮಾಡಿರಿ ಆದರೆ ಇಷ್ಟಕ್ಕೆ ಮಾಡಲಾಗುತ್ತಿದೆಯೇ? ಪರಂಧಾಮ ನಿವಾಸಿ ಆಗಬೇಕು ಎಂದು ಆಜ್ಞೆಯನ್ನು ಕೊಟ್ಟಾಕ್ಷಣ ಮನಸ್ಸು ಆಜ್ಞೆಯನ್ನು ಪಾಲಿಸುತ್ತಿದೆಯೋ ಅಥವಾ ಇಲ್ಲವೋ ಎಂದು ನೋಡಿರಿ. (ವ್ಯಾಯಾಮ) ಒಳ್ಳೆಯದು.

**ನಾಲ್ಕಾರು ಕಡೆಯ ಸರ್ವ ಖಜಾನೆಗಳ ಅಧಿಕಾರಿ(ಮಾಲೀಕ) ಮಕ್ಕಳಿಗೆ, ಸದಾ ಕಷ್ಟವನ್ನು ಸೆಕೆಂಡ್ನಲ್ಲಿ ಪರಿವರ್ತನೆ ಮಾಡುವ ಸದಾ ಸಹಜಯೋಗಿ, ಸದಾ ಸಂಕಲ್ಪ, ಸಮಯ, ಮಾತು, ಕರ್ಮವನ್ನು ಶ್ರೇಷ್ಠ ಮಾಡುವಂತಹವರಿಗೆ, ಸದಾ ಜಾಮಾದ ಖಾತೆಯನ್ನು ಹೆಚ್ಚಿಸುವಂತಹವರಿಗೆ, ಸದಾ ಮನಸ್ಸಿನ ಮಾಲೀಕರಿಗೆ, ಮನಸ್ಸು-ಬುದ್ಧಿ-ಸಂಸ್ಕಾರಗಳನ್ನು ಆದೇಶದಂತೆ ನಡೆಸುವವರಿಗೆ, ಇಂತಹ ಸ್ವರಾಜ್ಯ ಅಧಿಕಾರಿ ಮಕ್ಕಳಿಗೆ, ದೇಶದಲ್ಲಿರಲಿ ಅಥವಾ ವಿದೇಶದಲ್ಲಿರಲಿ ಆದರೆ ಹೃದಯದಿಂದ ದೂರವಿಲ್ಲ, ಇಂತಹ ನಾಲ್ಕಾರು ಕಡೆಯ ಮಕ್ಕಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗು ನಮಸ್ತೆ.**

ಸೇವೆಗಾಗಿ ಬಂದಿರುವ ಸೇವಾಧಾರಿಗಳಿಗೆ ವಿಶೇಷ-- ಯು.ಪಿ .ಯ ಸರದಿಯಾಗಿದೆ. ಯು.ಪಿಯಿಂದ ಬಂದಿರುವ ಸೇವಾಧಾರಿಗಳು ಕೈ ಎತ್ತಿ. ನೋಡಿ ಸೇವಾಧಾರಿಗಳಿಗೆ ಎಷ್ಟು ಮಹತ್ವವಿದೆ. ಬ್ರಾಹ್ಮಣರ ಸೇವೆ ದೊಡ್ಡ ಪುಣ್ಯವಾಗಿದೆ ಎಂದು ಹಾಡನ್ನು ಹೇಳುತ್ತಾರೆ. ಭಕ್ತಿ ಮಾರ್ಗದಲ್ಲಿ 100 ಅಥವಾ 200 ಬ್ರಾಹ್ಮಣರ ಸೇವೆಯನ್ನು ಮಾಡುತ್ತಾರೆ ಹಾಗೂ ಮಧುಬನದಲ್ಲಿ ಅನೇಕ ಬ್ರಾಹ್ಮಣರ ಸೇವೆಯನ್ನು ಮಾಡುತ್ತೀರಿ ಮತ್ತು ಪ್ರತಿಯೊಬ್ಬ ಬ್ರಾಹ್ಮಣರ ಆಶೀರ್ವಾದ ಸೇವಾದಾರಿಗಳಿಗೆ ಸ್ವತಹವಾಗಿ ಸಿಗುತ್ತದೆ ಹೇಳುವ ಅವಶ್ಯಕತೆ ಇಲ್ಲ ಆದರೆ ಸಂಗ್ರಹವಾಗೆ ಬಿಡುತ್ತದೆ. ಒಂದು, ಆಶೀರ್ವಾದದ ಖಾತೆ ಸಂಗ್ರಹವಾಗುತ್ತದೆ, ಎರಡನೆಯದಾಗಿ, ಸೇವೆಯ ಪುಣ್ಯದ ಖಾತೆ ಸಂಗ್ರಹವಾಗುತ್ತದೆ ಮೂರನೆಯದಾಗಿ, ಬ್ರಾಹ್ಮಣರ ಸಮೀಪ ಸಂಬಂಧದಲ್ಲಿ ಬರುತ್ತಿರಿ ಮತ್ತು ಬಾಪ್‌ದಾದಾರೊಂದಿಗೆ ಮಿಲನದ ಎಕ್ಸ್ಟ್ರಾ ಟರ್ನ್ ಸಿಗುತ್ತದೆ. ಆದ್ದರಿಂದ ಸೇವೆಯ ಫಲ ಅಪರಿಮಿತವಾಗಿದೆ! ಸೇವಾದಾರಿ ಅಂದರೆ ಸಂಗ್ರಹಿಸುವವರು. ಆದ್ದರಿಂದ ತುಂಬಾ ಚೆನ್ನಾಗಿ ಸೇವೆಯನ್ನು ಮಾಡಿದಿರಿ. ಮನಃಪೂರ್ವಕ ಸೇವೆಯನ್ನು ಮಾಡಿದಿರಿ ಮತ್ತು ಅದು ಹೃದಯರಾಮನ

ಹತ್ತಿರ ತಲುಪಿಬಿಟ್ಟಿತು ಯು.ಪಿಅವರು ಚೆನ್ನಾಗಿದ್ದೀರಲ್ಲವೇ! ಸೇವಾದಾರಿಯಾಗಿ ಬಂದವರಿಗೆಲ್ಲಾ ಪ್ರತ್ಯಕ್ಷ ಫಲ ಸಿಗುತ್ತದೆ. ಭವಿಷ್ಯದಲ್ಲಂತೂ ಸಿಕ್ಕೇ ಸಿಗುತ್ತದೆ, ವರ್ತಮಾನದಲ್ಲೂ ಸಂಚಯವಾಗುತ್ತದೆ.

ಡಬಲ್ ವಿದೇಶಿಯರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದಾರೆ ಡಬಲ್ ವಿದೇಶಿಯರು ಕೈಎನ್ನು ಎತ್ತಿರಿ, ನೋಡಿ ಡಬಲ್ ವಿದೇಶಿಯರಿಗೆ ಬಹಳ ಚಾನ್ಸ್ ಸಿಗುತ್ತದೆ ಪ್ರತಿಯೊಂದು ಗ್ರೂಪ್ ನಲ್ಲೂ ಡಬಲ್ ವಿದೇಶಿಯರು ಇರುತ್ತಾರೆ ಡಬಲ್ ವಿದೇಶಿಯರಿಗೆ ಪ್ರತಿಯೊಂದು ಟರ್ನಲ್ಲು ಬರುವ ಅವಕಾಶವಿದೆ ಹಾಗಾದರೆ ಇದು ಕಡಿಮೆ ಭಾಗ್ಯವೇ? ಇವರ ತ್ಯಾಗ ಇವರ ಸಾಹಸ ಮತ್ತು ಇವರ ಹೃದಯದ ಸತ್ಯತೆಯ ಮೇಲೆ ಬಾಪ್‌ದಾದಾ ಸದಾ ಸಂತೋಷಗೊಳ್ಳುತ್ತಾರೆ ಎಂದು ತಮಗೆಲ್ಲಾ ತಿಳಿದಿದೆ. ತಾವೆಲ್ಲರೂ ಏನು ಹೇಳುತ್ತೀರಿ? ಹೃದಯ ಸತ್ಯವಾಗಿದ್ದರೆ, ಮನೋ ಕಾಮನೆಗಳು ಈಡೇರುತ್ತವೆ..... . ಹಾಗಾಗಿ ಇವರು ಶುಭ್ರವಾದ ಹಾಗೂ ಸತ್ಯ ಹೃದಯದವರಾಗಿದ್ದಾರೆ .. ಬಿದ್ದರೂ ಕೂಡ ಸತ್ಯವನ್ನೇ ಹೇಳುತ್ತಾರೆ ಮರೆಮಾಚುವುದಿಲ್ಲ ಹಾಗೂ ಸತ್ಯವನ್ನು ಹೇಳಿದರೆ ಅರ್ಧ ಕ್ಷಮೆಯಾಗುತ್ತದೆ ಆದ್ದರಿಂದ ಬಾಪ್ ದಾದಾ ಯಾವಾಗಲೂ ಡಬಲ್ ವಿದೇಶಿಯರನ್ನು ಸ್ಮರಿಸುತ್ತಾರೆ ಹಾಗೂ ನೆನಪು, ಪ್ರೀತಿಯನ್ನು ಕೊಡುತ್ತಾರೆ. ಇದು ಅದ್ಭುತವಾಗಿದೆ ಮತ್ತು ಅದ್ಭುತವನ್ನು ಮಾಡುತ್ತಾ ಬಾಪ್‌ದಾದಾರವರ ಜೊತೆಗೆ ತಮ್ಮ ಮನೆಯನ್ನು ತಲುಪಿಡುತ್ತೀರಿ. ಹಾಗಾಗಿ ಡಬಲ್ ವಿದೇಶಿಯರಿಗೆ ವಿಶೇಷವಾದ ಕೋಟಿ ಕೋಟಿ ನೆನಪು ಪ್ರೀತಿ. ಭಾರತ ವಾಸಿಗಳಿಗೆ ಇಲ್ಲ ಎಂದಲ್ಲ . ಭಾರತೀಯರಿಗೆ ಮತ್ತೊಮ್ಮೆ ಕೋಟಿ ಕೋಟಿ ನೆನಪು ಪ್ರೀತಿ.

ಇಂದೋರ್ ಹಾಸ್ಟೆಲ್ ನ ಕನ್ಯೆಯರು-- ಒಬ್ಬ ಕನ್ಯೆ 100 ಬ್ರಾಹ್ಮಣರಿಗಿಂತ ಉತ್ತಮ ಎಂದು ಕನ್ನೆಯರಿಗಾಗಿ ಹಾಡಲಾಗುತ್ತದೆ ಏಕೆ ಉತ್ತಮರು? ಏಕೆಂದರೆ ಸೇವೆ ಮಾಡಿ ಅನೇಕ ಬ್ರಾಹ್ಮಣರ ಆಶೀರ್ವಾದವನ್ನು ಪಡೆಯಬೇಕು ಆದ್ದರಿಂದ ಕುಮಾರಿಯರು ಬೋಡಿರ್‌ಂಗ್ ನಂತರ ಏನು ಮಾಡುತ್ತೀರಿ?ಯಾವ ಲಕ್ಷ್ಯವನ್ನು ಇಟ್ಟುಕೊಂಡಿದ್ದೀರಿ? ಸೇವೆ ಮಾಡುತ್ತೀರಾ? ತಲೆಯ ಮೇಲೆ ಕಿರೀಟವನ್ನು ಇಟ್ಟುಕೊಳ್ಳುತ್ತಿರೋ ಅಥವಾ ಬುಟ್ಟಿಯನ್ನು ಇಟ್ಟುಕೊಳ್ಳುತ್ತೀರೋ?ಏನು ಮಾಡುತ್ತೀರಿ? (ಕಿರೀಟ) ನೌಕರಿಯ ಬುಟ್ಟಿಯನಂತು ಎತ್ತುವುದಿಲ್ಲ ತಾನೇ? 100 ಬ್ರಾಹ್ಮಣರಿಗಿಂತ ಉತ್ತಮ ಎಂಬುದರ ಅರ್ಥವೇ ಆಗಿದೆ 100 ಬ್ರಾಹ್ಮಣರ ಆಶೀರ್ವಾದವನ್ನು ತೆಗೆದುಕೊಳ್ಳುವುದು. ಹಾಗಾಗಿ ಇಷ್ಟೊಂದು ಸೇವೆಯನ್ನು ಮಾಡುತ್ತೀರಾ? ಒಳ್ಳೆಯದು ಅಡ್ವಾನ್ಸ್ ಅಭಿನಂದನೆಗಳು ಎಲ್ಲರ ಆಶೀರ್ವಾದಗಳನ್ನು ಪಡೆಯಿರಿ. ಒಳ್ಳೆಯದು.

(ಬಾಪ್ ದಾದಾ ಇಡೀ ಸಭಾಂಗಣದ ಪ್ರದಕ್ಷಿಣೆ ಹಾಕಿ ಎಲ್ಲಾ ಮಕ್ಕಳಿಗೆ ದೃಷ್ಟಿಕೊಟ್ಟು ವಾಪಸ್ ಸ್ಟೇಜ್ ನ ಮೇಲೆ ಮರಳಿದರು)

ಮೋಹಿನಿ ಬೆಹನ್ ಅವರ ಆರೋಗ್ಯ ಸರಿ ಇಲ್ಲ ಅಹಮದಾಬಾದ್ ನಿಂದ ತಪಾಸಣೆ ಮಾಡಿಸಿ ಬಾಪ್‌ದಾದಾ ಮುಂದೆ ಬಂದಿದ್ದಾರೆ. ಸರಿಯಾಗಿಯೇ ಇದೆ ಆರೋಗ್ಯ ಸರಿಯಾಗಿತ್ತು ಸರಿಯಾಗಿದೆ ಮತ್ತು ಸರಿಯಾಗಿ ಇರುತ್ತದೆ( ಡಾಕ್ಟರ್6-7 ದಿನಗಳ ವಿಶ್ರಾಂತಿ ಸೂಚಿಸಿದ್ದಾರೆ) ಬೇಗನೆ ಚೇತರಿಸಿಕೊಂಡರು. ಧೈರ್ಯವಾಗಿದ್ದರು ಆದ್ದರಿಂದ ಸಾಹಸ ಮತ್ತು ಸಹಾಯದಿಂದ ತಲುಪಿಬಿಟ್ಟರು. ಇಲ್ಲಿ ಮಧ್ಯದಲ್ಲಿ ಸುತ್ತು ಹಾಕಿಕೊಂಡು ಹೋದರು .

ದಾದಿಯರೊಂದಿಗೆ -- ಉತ್ತಮ ಸೇವೆ ಮಾಡಿದರಿ ಬಹಳ ಚೆನ್ನಾಗಿದೆ. ನಿಮಿತ್ತರಾಗಿರುವವರು ಸಮಯದಲ್ಲಿ ಹೆಚ್ಚುವರಿ ಶಕ್ತಿಯನ್ನು ಪಡೆಯುತ್ತಾರೆ ನೋಡಿ ತಾವೆಲ್ಲ ಆದಿ ರತ್ನಗಳ ಆಧಾರದ ಮೇಲೆ ಸ್ಥಾಪನೆಯ ಕಾರ್ಯ ನಡೆಯುತ್ತಿದೆ ಸರಿ ತಾನೇ? ಬಾಪ್‌ದಾದಾ ಸದಾ ಸೇವಾಯುಕ್ತ ರತ್ನಗಳನ್ನು ನೋಡುತ್ತಾ ಇರುತ್ತಾರೆ ಚೆನ್ನಾಗಿದ್ದೀರಾ ಶರೀರದ ಲೆಕ್ಕಾಚಾರವಿದೆ ಆದರೆ 'ಶಿಲುಬೆಯಿಂದ ಮುಳ್ಳಾಗುತ್ತದೆ'. ಸಣ್ಣ ಪ್ರಮಾಣದಲ್ಲಿ ಸಮಾಪ್ತಿಯಾಗುತ್ತದೆ ಚಿಂತಿಸಬೇಡಿ. ಲೆಕ್ಕಾಚಾರ ಚುಕ್ತ ಆಗುತ್ತಿದೆ ಹಾಗಾಗಿ ಚಿಂತಿಸುವುದಿಲ್ಲ. ಹೆಮ್ಮೆಯಿಂದ ಇರುತ್ತಾರೆ. ಇತರರಿಗೂ ಹೆಮ್ಮೆಯನ್ನು ನೆನಪಿಸುತ್ತಾರೆ. ಮಾಲೀಕರಾಗಿದ್ದಾರಲ್ಲವೇ! ಶರೀರವನ್ನು ನಡೆಸುವ ಯುಕ್ತಿಯನ್ನು ಕಲಿತಿದ್ದಾರೆ ಶರೀರಕ್ಕೂ ತಮ್ಮೊಂದಿಗೆ ಪ್ರೀತಿ ಇದೆಯಲ್ಲವೇ! ಎಲ್ಲರೂ ಮಹಾರಥಿಗಳನ್ನು ಇಷ್ಟಪಡುತ್ತಾರೆ ಪ್ರೀತಿ ಇದೆಯಲ್ಲವೇ!( ದಾದಿಜಿ ಅವರಿಗೆ) ನೋಡಿ ಎಷ್ಟು ಕೆಲಸ ಮಾಡುತ್ತಾರೆ? ಆದರೆ ಸದಾ ಹರ್ಷಿತವಾಗಿರುತ್ತಾರೆ.ನೀವು ಕಲಿಯುತ್ತಿದ್ದೀರಲ್ಲವೇ . ಎಂದೂ ಆಯಾಸದ ಯಾವುದೇ ಲಕ್ಷಣಗಳು ಇರುವುದಿಲ್ಲ. ಇದಾಗಿದೆ ತಂದೆಯ ಸಮಾನರಾಗುವ ಸಂಕೇತ. ಬ್ರಹ್ಮ ಬಾಬಾ ಮಹಾರಥಿಯರಿಗೆ, ವಿಶೇಷ ಮಕ್ಕಳಿಗೆ , ಎಲ್ಲಾ ವರದಾನಗಳು, ಶಕ್ತಿಗಳು ಮತ್ತು ಜವಾಬ್ದಾರಿಗಳನ್ನು ಕೊಟ್ಟು ಹೋಗಿದ್ದಾರೆ ತಮ್ಮೆಲ್ಲರಿಗಾಗಿ ಬಾಪ್‌ದಾದಾ ಅವರು ವಿಶೇಷವಾಗಿ ಇವರನ್ನು 'ದಣಿವರಿಯದವರಾಗುವ' ಆಶೀರ್ವಾದವನ್ನು ನೀಡಿದ್ದಾರೆ ತಾವೆಲ್ಲರೂ ಕೂಡ ದಣಿವಿಲ್ಲದೆ ವಿಶ್ವವನ್ನು ಪರಿವರ್ತನೆ ಮಾಡುತ್ತಿದ್ದೀರಿ ಹಾಗೂ ಮಾಡುತ್ತಾ ಇರುತ್ತೀರಿ ಒಳ್ಳೆಯದು . ಪಾಂಡವರೂ ಶ್ರೇಷ್ಠರಾಗಿದ್ದಾರೆ. ಓಂ ಶಾಂತಿ.

ರಿವೈಸ್ ಕೋರ್ಸ್ 30-11-1999.

***ಪಾಸ್ ವಿತ್ ಆನರ್ ಆಗಲು ಎಲ್ಲಾ ಖಜಾನೆಗಳ ಖಾತೆಯನ್ನು ಜಮಾ ಮಾಡುವುದರ ಮೂಲಕ ಸಂಪನ್ನರಾಗಿರಿ.***

ಬಾಪ್‌ದಾದಾ ಎಲ್ಲಾ ಮಕ್ಕಳ ಪ್ರತಿಯೊಂದು ಖಜಾನೆಯ ಜಮಾದ ಖಾತೆಯ ಚಾರ್ಟನ್ನು ನೋಡುತ್ತಿದ್ದರು. ಅದರಲ್ಲಿ ಎಷ್ಟು ಜಮಾದ ಖಾತೆ ಇರಬೇಕೋ ಅಷ್ಟು ಇಲ್ಲ ಎಂಬುದನ್ನು ನೋಡಿದರು. ಸಮಯ, ಸಂಕಲ್ಪ, ಮಾತು ಸಹ ವ್ಯರ್ಥವಾಗುತ್ತಿದೆ. ಕೆಲವೊಮ್ಮೆ ಸಮಯದ ಮಹತ್ವ ನಡೆಯುತ್ತಾ ನಡೆಯುತ್ತಾ ಪ್ರತ್ಯಕ್ಷ ರೂಪದಲ್ಲಿ ಕಡಿಮೆಯಾಗುತ್ತಿದೆ. ಸಮಯದ ಪ್ರಾಮುಖ್ಯತೆಯನ್ನು ಯಾವಾಗಲೂ ನೆನಪಿಟ್ಟುಕೊಂಡರೆ ನೀವು ಸಮಯವನ್ನು ಇನ್ನೂ ಹೆಚ್ಚಾಗಿ ಸಫಲ ಮಾಡಿಕೊಳ್ಳಬಹುದು. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಒಂದು ದಿನದಲ್ಲಿ ತಂದೆಯ ಮೂಲಕ, ತಂದೆಯ ಜ್ಞಾನದ ಮೂಲಕ, ನೆನಪಿನ ಮೂಲಕ ಪ್ರತಿಯೊಂದು ಹೆಜ್ಜೆಯಲ್ಲಿ ಪದಮಾ ಪದಂ ಖಜಾನೆಗಳನ್ನು ಜಮಾ ಮಾಡಿ ಪರಮಾತ್ಮ ತಂದೆಯಿಂದ ನನ್ನ ಭಾಗ್ಯ ಎಷ್ಟು ಶ್ರೇಷ್ಠವಾಗಿ ತಯಾರಾಗಿದೆ ಎಂಬ ಶ್ರೇಷ್ಠ ಸ್ಮೃತಿಯಲ್ಲಿ ಇದ್ದೇನೆ.

2. ನಾನು ತಂದೆಯ ಸರ್ವಪ್ರಾಪ್ತಿಗಳ ಅಧಿಕಾರಿಯಾಗಿದ್ದೇನೆ.

3. ನಾನು ದಿನವಿಡೀ ಖಜಾನೆಗಳನ್ನು ಎಷ್ಟು ಜಮಾ ಮಾಡಿಕೊಂಡಿದ್ದೇನೆ ಮತ್ತು ಎಷ್ಟು ಕಳೆದುಕೊಂಡಿದ್ದೇನೆ ಎಂದು ಪರಿಶೀಲಿಸಿಕೊಳ್ಳುತ್ತಿದ್ದೇನೆ.

4. ಆತ್ಮವೂ ಬಿಂದು, ತಂದೆಯೂ ಬಿಂದು ಮತ್ತು ಡ್ರಾಮದಲ್ಲಿ ಗತಿಸಿ ಹೋದದ್ದಕ್ಕೆ ಬಿಂದುವನ್ನು ಇಟ್ಟು ನನ್ನ ಜಮಾದ ಖಾತೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದೇನೆ.

5. ನಾನು ಪ್ರತಿಯೊಂದು ಗಳಿಗೆಯಲ್ಲಿ ಸಮಯ ಮತ್ತು ಸಂಕಲ್ಪ ಎಷ್ಟು ಸಾಧಾರಣವಾಗಿ ಹೋಗುತ್ತಿವೆ ಎಂದು ಪರಿಶೀಲಿಸಿ ಸಫಲ ಮಾಡಿಕೊಳ್ಳುತ್ತಿದ್ದೇನೆ.

6. ನಾನು ಬಹಳ ಸಮಯದ ಜಮಾದ ಖಾತೆಯಿಂದ ಪೂರ್ಣ ವಾರಸತ್ವವನ್ನು ಪಡೆದಿದ್ದೇನೆ.

7. ನಾನು ಸಂಕಲ್ಪ ಮತ್ತು ಕರ್ಮವನ್ನು ಪ್ಲಾನ್ ಮತ್ತು ಪ್ರಾಕ್ಟಿಕಲ್ ಎರಡನ್ನು ಸಮಾನವಾಗಿ ಇಟ್ಟುಕೊಂಡಿದ್ದೇನೆ.

8. ನನಗೆ ಸಂಗಮಯುಗದ ಸಮಯದ ಸ್ಮೃತಿ, ನಾನು ಯಾರು ಎಂಬ ಆತ್ಮಿಕ ನಶೆ ಪ್ರತ್ಯಕ್ಷ ರೂಪದಲ್ಲಿ ಇದೆ.

9. ಮಾಸ್ಟರ್ ರಚಯಿತನಾದ ನಾನು ನನ್ನ ರಚನೆಯಾದ ಸಮಯಕ್ಕಾಗಿ ಕಾಯದೇ, ಸಮಯಕ್ಕಿಂತಲೂ ಮೊದಲೇ ಸ್ವಯಂ ಪರಮಾತ್ಮನಿಂದ ಸಂಪನ್ನವಾಗಿ ತಯಾರಾಗಿದ್ದೇನೆ.

10. ನಾನು 63 ಜನ್ಮಗಳಿಂದ ಭಾರವನ್ನು ಹೊತ್ತು ಬಲಹೀನವಾಗುವ ಅಭ್ಯಾಸವನ್ನು ಸಮಾಪ್ತಿ ಮಾಡಿ ಭಾರವನ್ನೆಲ್ಲ ತಂದೆಗೆ ಅರ್ಪಣೆ ಮಾಡಿ ಶ್ರಮದಿಂದ ಮುಕ್ತವಾಗಿರುವ ಸಹಜ ಯೋಗಿ ಆಗಿದ್ದೇನೆ.

11. ನಾನು ಮಾಸ್ಟರ್ ಸರ್ವ ಶಕ್ತಿವಂತನು.

12. ನಾನು ಜ್ಞಾನವೆಂಬ ದರ್ಪಣದಲ್ಲಿ ನನ್ನ ಅದೃಷ್ಟ ರೇಖೆಯನ್ನು ನೋಡಿಕೊಳ್ಳುತ್ತಿದ್ದೇನೆ ಮತ್ತು ನನ್ನ ಅದೃಷ್ಟ ಚಿತ್ರವನ್ನು ನೋಡುತ್ತಾ ವಾಹ್ ನನ್ನ ಅದೃಷ್ಟ, ವಾಹ್ ನನ್ನ ತಂದೆ, ವಾಹ್ ನನ್ನ ಪರಿವಾರ ಎಂದು ಕೊಳ್ಳುತ್ತಿದ್ದೇನೆ.

13. ನನಗೆ ಆತ್ಮನೊಂದಿಗೆ, ಶರೀರದೊಂದಿಗೆ ಅಥವಾ ಪ್ರಕೃತಿಯೊಂದಿಗೆ ಯಾವ ಖಾತೆ ಇದ್ದರೂ ನಾನು ಕರ್ಮಗಳ ಖಾತೆಯನ್ನು ಯೋಗಾಗ್ನಿಯಲ್ಲಿ ಭಸ್ಮ ಮಾಡಿಕೊಂಡಿದ್ದೇನೆ.

14. ನನ್ನ ಪ್ರತಿಯೊಂದು ಮಾತಿನಲ್ಲಿ ಆತ್ಮಿಕ ಭಾವ ಮತ್ತು ಶುಭ ಭಾವನೆ ಅಥವಾ ಶ್ರೇಷ್ಠ ಭಾವನೆ ಇವೆ.

15. ನಾನು ಸಮಯದ ಖಜಾನೆ, ಮಾತಿನ ಖಜಾನೆ, ಸಂಕಲ್ಪದ ಖಜಾನೆ, ಶಕ್ತಿಗಳ ಖಜಾನೆ, ಜ್ಞಾನದ ಖಜಾನೆ, ಗುಣಗಳ ಖಜಾನೆಯಿಂದ ತುಂಬಿ ತುಳುಕುತ್ತಿರುವ ಪಾಸ್ ವಿತ್ ಆನರ್ ಸ್ವರೂಪ.

16. ನಾನು ಪ್ರತಿಯೊಂದು ವಿಷಯದಲ್ಲಿ ಬ್ರಹ್ಮಾ ತಂದೆಯ  ಸಮಾನವಾಗಿ ಹೊಸದೇನು ಅಲ್ಲ (ನಥಿಂಗ್ ನ್ಯೂ) ಎಂದು ತಿಳಿದುಕೊಳ್ಳುವ ನಿಶ್ಚಿಂತ ಚಕ್ರವರ್ತಿಯಾಗಿದ್ದೇನೆ.

17. ನಾನು ಧೈರ್ಯದಿಂದ ತಂದೆಯ  ಸಹಾಯವನ್ನು ಪಡೆದಿದ್ದೇನೆ.

18. ನಾನು ಯಜಮಾನಿಯಾಗಿ ಮತ್ತು ನಿಶ್ಚಿತ ಚಕ್ರವರ್ತಿಯಾಗಿ ಇದ್ದೇನೆ.

19. ಲಾಸ್ಟ್ ಸೋ ಫಾಸ್ಟ್ ಎಂಬ ಸ್ಲೋಗನನ್ನು ಸ್ಮೃತಿಯಲ್ಲಿಟ್ಟುಕೊಂಡು ನಾನು ಫಾಸ್ಟ್ ಆಗಿ ಹೋಗಿ ಫಸ್ಟ್ ನಲ್ಲಿ ಬಂದಿದ್ದೇನೆ.

20. ಸ್ವರಾಜ್ಯಾಧಿಕಾರಿಯಾದ ನಾನು ನನ್ನ ಸೂಕ್ಷ್ಮ ಕರ್ಮೇಂದ್ರಿಯಗಳಾದ ಮನಸ್ಸು, ಬುದ್ಧಿ, ಸಂಸ್ಕಾರಗಳ ಮೇಲೆ ಕೂಡ ಕಂಟ್ರೋಲ್ ಅನ್ನು ಇಟ್ಟುಕೊಂಡು ಪಾಸ್ ವಿತ್ ಆನರ್ ಆಗಿದ್ದೇನೆ.